# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 205 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 16.02.2025 • ಭಾನುವಾರ • ಪುಟ:04 • ಬೆಲೆ:2

Volume:02 • Issue: 205 • PRGI No:KARKAN/2023/88055 • VIJAYANAGARA • 16.02.2025 • Sunday • Page:04 • Rs:2



ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+

Digital E-PAPER READERS



No.1 HAMPI TIMES LEADING VIJAYANAGARA District News Paper

Contact for Advertisements: 9448633038



TARGET

SSLC VISION 625

SSLC ವಿದ್ಯಾರ್ಥಿಗಳಿಗಾಗಿ ವಿಶೇಷ ಕಾರ್ಯಾಗಾರ

ಹೊಸಪೇಟೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ

ಹಂಪಿ ಟೈಮ್ಸ್ ಸಹಯೋಗ

ಫೆಬ್ರವರಿ 20 2025 ಗುರುವಾರ

ಸಮಯ: ಬೆಳಿಗ್ಗೆ 10.00 ರಿಂದ

ಸ್ಥಳ: ಸ.ಪ.ಪೂ.ಕಾಲೇಜ್ ಬಾಲಕಿಯರ ಪ್ರೌಢಶಾಲೆ, ಹೊಸ ಅಮರಾವತಿ, ಹೊಸಪೇಟೆ

ಸೂಚನೆ: ಎಸ್ ಎಸ್‌ಎಲ್‌ಸಿ ವಿದ್ಯಾರ್ಥಿಗಳು ಕೇಳಬಯಸುವ ವಿಷಯವಾರು ಹಾಗೂ ಸಾಮಾನ್ಯ ಪ್ರಶ್ನೆಗಳನ್ನು ಪ್ರತ್ಯೇಕವಾಗಿ ಸ್ಪಷ್ಟವಾಗಿ ಬರೆದುಕೊಂಡು ವಿಶೇಷ ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬೇಕು. ಹೆಚ್ಚಿನ ಮಾಹಿತಿಗೆ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರನ್ನು ಸಂಪರ್ಕಿಸಿ.



For Ads: 94486 33038


## ದೇವಾಲಯ ದರ್ಶನ



ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ


## ಕೆಲಸಕ್ಕೆ ಬೇಕಾಗಿದ್ದಾರೆ

ಮೆಡಿಕಲ್ ಶಾಪ್‌ನಲ್ಲಿ ಕೆಲಸ
ಕಂಪ್ಯೂಟರ್ ಆಪರೇಟರ್ – 1
ಬಾಯ್ಸ್ – 2
ಸ್ಥಳ: ಹೊಸಪೇಟೆ
ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
ಮೊ: 9739303956


### ಜಿಲ್ಲಾ ನ್ಯಾಯಾಲಯ ಕಾರ್ಯಾರಂಭಕ್ಕೆ ತಾತ್ಕಾಲಿಕ ಕಟ್ಟಡ ವ್ಯವಸ್ಥೆ | ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ

# ಜಿಲ್ಲಾಡಳಿತ ಸಂಕೀರ್ಣಕ್ಕೆ 200 ಕೋಟಿ ರೂ ಸರ್ಕಾರಕ್ಕೆ ಪ್ರಸ್ತಾವನೆ

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆಯ ನೂತನ ಜಿಲ್ಲಾ ನ್ಯಾಯಾಲಯ ಕಾರ್ಯಾರಂಭಕ್ಕೆ ತಾತ್ಕಾಲಿಕವಾಗಿ ನೀಡಿರುವ ತಹಶೀಲ್ದಾರ ಕಚೇರಿ ಆವರಣದ ಕಟ್ಟಡವನ್ನು ಜಿಲ್ಲಾ ಮಟ್ಟದ ನ್ಯಾಯಾಧೀಶರೊಂದಿಗೆ ಶಾಸಕರಾದ ಹೆಚ್.ಆರ್.ಗವಿಯಪ್ಪ ಶನಿವಾರ ವೀಕ್ಷಿಸಿದರು.



ಬಳಿಕ ಅವರು ಸುದ್ದಿಗಾರರೊಂದಿಗೆ ಮಾತ ನಾಡಿ, ತಾಲೂಕು ಕಚೇರಿಯ ಹಳೆಯ ಕಟ್ಟಡವನ್ನು ಸದ್ಯಕ್ಕೆ ಜಿಲ್ಲಾ ನ್ಯಾಯಾಲಯ ಕಾರ್ಯಾ ರಂಭಕ್ಕೆ ನೀಡಲಾಗಿದೆ. ಜಿಲ್ಲಾಧಿಕಾರಿಗಳ ಕಚೇರಿ ಬಳಿ ನ್ಯಾಯಾಲಯದ ಸಂಕೀರ್ಣ ನಿರ್ಮಾಣವಾಗುವವರೆಗೆ ಇಲ್ಲಿ ನ್ಯಾಯಾಲಯ ಕಾರ್ಯವನ್ನು ಆರಂಭಿಸಲಾಗುವುದು. ನೂತನ ಕಟ್ಟಡ ನಿರ್ಮಾಣಕ್ಕೆ ಇನ್ನು ಎರಡು ವರ್ಷಗಳ ಕಾಲ ಅಗತ್ಯವಿದೆ. ನೂತನ ನ್ಯಾಯಾಲಯಕ್ಕೆ ಸಿಬ್ಬಂದಿ ನೇಮಕಾತಿ ಪ್ರಕ್ರಿಯೆ ಆರಂಭವಾಗಿದ್ದು, ಜಿಲ್ಲಾ ನ್ಯಾಯಾಧೀಶರು ಎಲ್ಲವನ್ನೂ ನಿರ್ವಹಿಸಲಿದ್ದಾರೆ. ಜಿಲ್ಲಾ ನ್ಯಾಯಾಲಯ ಸೇರಿ ಕಟ್ಟಡ ಸಹಿತ ಜಿಲ್ಲಾಡಳಿತ ಸಂಕೀರ್ಣ ನಿರ್ಮಾಣಕ್ಕೆ ತಕ್ಷಣವೇ 200 ಕೋಟಿ ರೂಗಿಂತ ಹೆಚ್ಚು ಅನುದಾನದ ಅಗತ್ಯವಿದೆ. ಇದನ್ನು ಒದಗಿಸುವಂತೆ ರಾಜ್ಯ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೆಕೆಆರ್‌ಡಿಬಿ ಅನುದಾನವನ್ನು ಸಹ ಇಲ್ಲಿಗೆ ನೀಡುವಂತೆ ಆಗ್ರಹಿಸಲಾಗಿದೆ ಎಂದರು.

ಜಿಲ್ಲಾ ವಕೀಲರ ಸಂಘದ ಉಪಾಧ್ಯಕ್ಷ ಮಂಜುನಾಥಸ್ವಾಮಿ ಹೆಚ್.ಎಂ, ಖಜಾಂಚಿ ಮರಿಯಪ್ಪ, ವಕೀಲರಾದ ಎ.ಕರುಣಾನಿಧಿ, ಕಟುಗೆ ಜಂಬಯ್ಯ, ಗುಜ್ಜಲ ನಾಗರಾಜ್, ಚಂದ್ರಶೇಖರ್ ಪಿ.ಯಲ್ಲೂಡು ಭಾಗವಹಿಸಿದ್ದರು.

# ಸಂತರ ತತ್ವಾದರ್ಶ ಪಾಲಿಸಿ

### ಶಾಸಕ ಹೆಚ್.ಆರ್.ಗವಿಯಪ್ಪ ಹೇಳಿಕೆ



■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶನಿವಾರ ಬಂಜಾರ್ ಜನಾಂಗದ ಕುಲಗುರು ಸಂತ ಶ್ರೀ ಸೇವಾಲಾಲ್ ಮಹಾರಾಜರ ಜಯಂತಿಯನ್ನು ಆಚರಿಸಲಾಯಿತು.

ಶಾಸಕ ಹೆಚ್.ಆರ್.ಗವಿಯಪ್ಪ ಸಂತ ಶ್ರೀ ಸೇವಾಲಾಲ್ ಭಾವಚಿತ್ರಕ್ಕೆ ಪುಷ್ಪ ಅರ್ಪಿಸಿ ಮಾತನಾಡಿದರು. ಶ್ರೀ ಸೇವಾಲಾಲ್ ಮಹಾರಾಜರ ತತ್ವದರ್ಶನಗಳನ್ನು ಪಾಲಿಸಬೇಕು ಎಂದರು.

ಜಿಲ್ಲಾಧಿಕಾರಿ ಎಂ.ಎಸ್. ದಿವಾಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಉಪನಿರ್ದೇಶಕ ಸಿದ್ದಲಿಂಗೇಶ್ವರ ರಂಗಣ್ಣವರ್ ಹಾಗೂ ಜಿಲ್ಲಾ ಆಡಳಿತ ಕಚೇರಿಯ ಸಿಬ್ಬಂದಿಯವರು ಭಾಗವಹಿಸಿದರು. ಬಂಜಾರ ಸಮಾಜದ ಮುಖಂಡರಾದ ಡಿ. ಲಾಲ್ಯಾನಾಯಕ್, ಎಲ್. ವಾಲ್ಯನಾಯ್ಕ, ಎಲ್. ರಾಮ ನಾಯಕ್ ಶಿವರಾಮ್ ನಾಯಕ್ ವೆಂಕಟೇಶ್ ನಾಯಕ್ ನಾರಾಯಣ್ ನಾಯಕ್ ಚಂದ್ರನಾಯಕ್ ಪೂಜಾರಿ ಡಾಕ್ಯ ನಾಯಕ್ ಹನುಮಾನಾಯಕ್ ಗೋವಿಂದ ನಾಯಕ್ ಕುಮಾರ್ ನಾಯಕ್ ಇತರರು ಇದ್ದರು.

### ಪುರಸಭೆ ಅಧ್ಯಕ್ಷ ಎಂ.ಮರಿ ರಾಮಣ್ಣ ಫಾರಂ ನಂ.3 ವಿತರಣೆ ಮೇಳಕ್ಕೆ ಚಾಲನೆ

# ಜನರ ನಿರೀಕ್ಷೆಯಂತೆ ಅಭಿವೃದ್ಧಿಗೆ ಆದ್ಯತೆ



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ

ಜನರ ನಿರೀಕ್ಷೆಯಂತೆ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದ್ದು, ನಿವಾಸಿಗಳ ಬಹುನಿರೀಕ್ಷೆಯ ಫಾರಂ.ನಂ.3 ಗಳನ್ನು ಮನೆ ಬಾಗಿಲಿಗೆ ತಲುಪಿಸಲು ಚಾಲನೆ ನೀಡಲಾಗಿದ್ದು, ಮನೆ ಮಾಲೀಕರು ಸದುಪಯೋಗಪಡಿಸಿಕೊಳ್ಳಬೇಕೆಂದು ಪುರಸಭೆ ಅಧ್ಯಕ್ಷ ಎಂ.ಮರಿರಾಮಣ್ಣ ಹೇಳಿದರು.

ಪಟ್ಟಣದ ಗುರುಭವನದಲ್ಲಿ ಶನಿವಾರ ಪುರಸಭೆವತಿಯಿಂದ ಹಮ್ಮಿಕೊಂಡಿದ್ದ ಫಾರಂ ನಂ.3 ಮೇಳಕ್ಕೆ ಚಾಲನೆ ನೀಡಿ, ಅರ್ಜಿ ಸಲ್ಲಿಸಿದವರಿಗೆ ಫಾರಂ ನಂ.3 ವಿತರಿಸಿ ಮಾತನಾಡಿದರು. ಅಗತ್ಯ ದಾಖಲಾತಿವುಳ್ಳವರಿಗೆ ಶೀಘ್ರವೇ ಫಾರಂ ನಂ.3 ದೊರಕಿಸಿಕೊಡುವ ನಿಟ್ಟಿನಲ್ಲಿ ಮೇಳ ಹಮ್ಮಿಕೊಳ್ಳಲಾಗಿದೆ. ಪಟ್ಟಣದ ವ್ಯಾಪ್ತಿಯಲ್ಲಿ ಸೇತುವೆಗೆ ಲೈಟಿಂಗ್, ಮುಕ್ತಿವಾಹನ, ಹೈಮಾಸ್ ದೀಪ ಸೇರಿದಂತೆ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ. ಎಲ್ಲ ಸದಸ್ಯರ ಸಹಕಾರದೊಂದಿಗೆ ಅಭಿವೃದ್ಧಿ ಮಾಡಲಾಗುವುದು. ಜನರಿಗೆ ತ್ವರಿತ ಸೇವೆ ನೀಡುವುದೇ ನಮ್ಮೆಲ್ಲರ ಆದ್ಯತೆಯಾಗಿದೆ. ರಾಜಕೀಯ ಮಾಡುವವರ ಬಗ್ಗೆ ಎಂದಿಗೂ ತಲೆಕೆಡಿಸಿಕೊಳ್ಳುವುದಿಲ್ಲ ಎಂದರು.

ಪುರಸಭೆ ಸದಸ್ಯ ಪವಾಡಿ ಹನುಮಂತಪ್ಪ ಮಾತನಾಡಿ, ಸಾರ್ವಜನಿಕರ ನಿರೀಕ್ಷೆಯಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಆದ್ಯತೆ ನೀಡಲಾಗಿದೆ ಎಂದರು.

ಪುರಸಭೆ ಕಂದಾಯ ಅಧಿಕಾರಿ ಮಾರೆಣ್ಣ ಮಾತನಾಡಿ, ಜಿಲ್ಲಾಕಾರಿಗಳ ಆಶಯದಂತೆ ಮೇಳ ಹಮ್ಮಿಕೊಳ್ಳಲಾಗಿದ್ದು, ಇದರಿಂದ ನೂರಾರು ಜನರಿಗೆ ಉಪಯೋಗವಾಗುತ್ತಿದೆ. ಅಗತ್ಯ ದಾಖಲೆಗಳನ್ನು ಸಲ್ಲಿಸಿದವರಿಗೆ ಸ್ಥಳದಲ್ಲೆ ವಿತರಿಸಲಾಗುತ್ತಿದೆ ಎಂದರು.

ಈ ಹಿಂದೆ ಹಲವು ವರ್ಷಗಳಿಂದ ವಾಸವಾಗಿರುವವರಿಗೆ ಅನಧಿಕೃತವೆಂದು ಘೋಷಿಸುವುದನ್ನು ಕೈಬಿಡಬೇಕು. ಸ್ಥಳೀಯವಾಗಿ ಬಹಳಷ್ಟು ವರ್ಷ ವಾಸವಾದ ಬಡವರಿಗೆ ನಿವೇಶನದ ಹಕ್ಕುಪತ್ರ ನೀಡಬೇಕು ಎಂದು ಪುರಸಭೆ ಸದಸ್ಯ ಜೋಗಿ ಹನುಮಂತಪ್ಪ ಒತ್ತಾಯಿಸಿದರು. ಸದಸ್ಯ ಅಜೀಜುಲ್ಲಾ ಮಾತನಾಡಿದರು. ಪುರಸಭೆ ಉಪಾಧ್ಯಕ್ಷೆ ಅಂಬಿಕಾ ದೇವೇಂದ್ರಪ್ಪ, ಸದಸ್ಯರಾದ ನವೀನ್‌ಕುಮಾರ್, ನಾಗರಾಜ ಜನ್ನು, ದೀಪಕ್, ದಾದಾಪೀರ್, ತ್ಯಾವಣಗಿ ಕೊಟ್ರೇಶ್, ಮಂಜುಳಾ ಕೃಷ್ಣನಾಯ್ಕ, ನೇತ್ರಾವತಿ ಸೆರೆಗಾರ ಹುಚ್ಚಪ್ಪ, ಉಪ್ಪಾರ್ ಬಾಳಪ್ಪ, ಮಾಜಿ ಸದಸ್ಯರಾದ ಅಲ್ಲಾಭಕ್ಷಿ, ಡಿಶ್ ಮಂಜುನಾಥ, ಮುಖಂಡರಾದ ವಿಜಯಕುಮಾರ್, ಸಿಖಂದರ್ ಖಾನ್ ಇದ್ದರು.


ಪುರಸಭೆ ಮುಖ್ಯಾಕಾರಿ ಪ್ರಭಾಕರ ಪಾಟೀಲ್, ಕಂದಾಯ ಅಕಾರಿ ಮಾರುತಿ ಸಂಜೆವರೆಗೂ ಬಿಡುವಿಲ್ಲದೆ ಕಾರ್ಯ ನಿರ್ವಹಿಸಿ, ಅರ್ಹರಿಗೆ ಫಾರಂ. ನಣ.3 ವಿತರಿಸಿದರು. ವ್ಯವಸ್ಥಾಪಕ ಚಂದ್ರಶೇಖರ ನಿರ್ವಹಿಸಿದರು. ಮೇಳದಲ್ಲಿ ಒಟ್ಟು 82ಕ್ಕೂ ಹೆಚ್ಚು ಜನರಿಗೆ ಮೊದಲ ದಿನ ಫಾರಂ ನಂ.3 ವಿತರಿಸಲಾಯಿತು.

# ವಾರ್ತಾ ಕಚೇರಿ ಕಟ್ಟಡ ತ್ವರಿತ ಪೂರ್ಣಕ್ಕೆ ಕ್ರಮ : ಎಚ್‌ಆರ್‌ಜಿ

■ ಹಂಪಿ ಟೈಮ್ಸ್ ಹೊಸಪೇಟೆ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕಚೇರಿ ನೂತನ ಕಟ್ಟಡ ನಿರ್ಮಾಣ ಸ್ಥಗಿತವಾಗಿದ್ದು ಇದನ್ನು ತ್ವರಿತವಾಗಿ ಪೂರ್ಣಗೊಳಿಸಲು ಕೆಆರ್ ಡಿಎಲ್ ನಿಗಮದ ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತದೆ ಎಂದು ವಿಜಯನಗರ ಶಾಸಕ ಹೆಚ್.ಆರ್.ಗವಿಯಪ್ಪ ತಿಳಿಸಿದರು.

ಅವರು ಶನಿವಾರ ಮುಖ್ಯರಸ್ತೆಗೆ ಹೊಂದಿಕೊಂಡಿರುವ ಪಟೇಲ್ ನಗರದಲ್ಲಿ ನಿರ್ಮಾಣವಾಗುತ್ತಿರುವ ನೂತನ ಕಟ್ಟಡ ಕಾಮಗಾರಿ ವೀಕ್ಷಣೆ ಮಾಡಿ ಮಾತನಾಡಿದರು. ವಾರ್ತಾ ಮತ್ತು ಸಾರ್ವಜನಿಕ ಇಲಾಖೆ ಉಪವಿಭಾಗ ಆರಂಭವಾದಾಗಿನಿಂದ ಕಾರ್ಯನಿರ್ವಹಿಸುತ್ತಿದೆ. ಹಂಪಿ ವಿಶ್ವ



ಪಾರಂಪಾರಿಕ ತಾಣವಾಗಿರುವುದರಿಂದ ವಾರ್ತಾ ಇಲಾಖೆ ಅನಿವಾರ್ಯವಾಗಿದ್ದು ಕಚೇರಿ ಮುಚ್ಚಬೇಕೆಂಬ ಆದೇಶವಾದರೂ ಇಲ್ಲಿನ ಪತ್ರಕರ್ತರ ಸತತ ಪ್ರಯತ್ನದ ಫಲವಾಗಿ ಉಪವಿಭಾಗ ಕಚೇರಿ ಉಳಿಯುವಂತಾಯಿತು ಎಂದು ಪತ್ರಕರ್ತರ ಕಾಳಜಿಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ವಿಜಯನಗರ ಜಿಲ್ಲೆಯಾಗಿದ್ದು ಎಲ್ಲಾ ಜಿಲ್ಲಾ ಮಟ್ಟದ ಕಚೇರಿಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯ ನಿರ್ವಹಿಸಲು ಸ್ವಂತ ಕಟ್ಟಡ ಅನಿವಾರ್ಯವಾಗಿದೆ. ವಾರ್ತಾ ಇಲಾಖೆ ಹಿರಿಯ ಸಹಾಯಕ ನಿರ್ದೇಶಕರ ಕಚೇರಿ ಕಟ್ಟಡ ರೂ.71 ಲಕ್ಷ ಅಂದಾಜಿನಲ್ಲಿ ಕಳೆದ ಎರಡು ವರ್ಷಗಳಿಂದ ನಿರ್ಮಾಣವಾಗುತ್ತಿದೆ. ಕಟ್ಟಡ ನಿರ್ಮಾಣ ಅಂತಿಮ ಹಂತಕ್ಕೆ ಬಂದು ಸ್ಥಗಿತ ಮಾಡಲಾಗಿದೆ. ಮುಂದಿನ ಹದಿನೈದು ದಿನಗಳಲ್ಲಿ ಕಾಮಗಾರಿ ಪೂರ್ಣಗೊಳಿಸಿ ಕಚೇರಿ ಇಲ್ಲಿ ಕಾರ್ಯನಿರ್ವಹಿಸಲು ಅನುವು ಮಾಡಿಕೊಡಲು ಕೆಆರ್ ಡಿಎಲ್ ಅಧಿಕಾರಿಗಳಿಗೆ ಸೂಚನೆ ನೀಡಲಾಗುತ್ತದೆ ಎಂದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 33 ದಿನ



ಮನಸ್ಸು ಮಾಡು-ಕರ್ತವ್ಯ ನಿಷ್ಠನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಸಮಾಜ ವಿಜ್ಞಾನ

## 10ನೇ ತರಗತಿ ಸಮಾಜವಿಜ್ಞಾನ– ಇತಿಹಾಸ ವಿಭಾಗ | 3/4 ಅಂಕದ ಬಹು ನೀರಿಕ್ಷೀತ ಪ್ರಶ್ನೆಗಳು

**1) 1857ರ ಕ್ರಾಂತಿಯ ವಿಫಲತೆಗೆ ಕಾರಣಗಳೇನು?**

1. ದಂಗೆಯು ಇಡೀ ಭಾರತಕ್ಕೆ ವ್ಯಾಪಿಸಿರಲಿಲ್ಲ, 2. ಸೈನಿಕರಲ್ಲಿ ನಿಶ್ಚಿತ ಗುರಿ ಇರಲಿಲ್ಲ, 3. ಸೂಕ್ತ ಮಾರ್ಗದರ್ಶನದ ಕೊರತೆ. 4. ಸೂಕ್ತ ಸೇನಾ ನಾಯಕತ್ವದ ಕೊರತೆ., 5. ಸ್ವಹಿತಾಸಕ್ತಿ ಮತ್ತು ಹಕ್ಕಿಗಾಗಿ ನಡೆದ ದಂಗೆಯಾಗಿತ್ತು 6. ಸೈನಿಕರಲ್ಲಿ ಶಿಸ್ತಿನ ಕೊರತೆ 7. ಭಾರತೀಯ ಸಿಪಾಯಿಗಳಿಗೆ ಆಧುನಿಕ ಶಸ್ತ್ರಾಸ್ತ್ರಗಳಿರಲಿಲ್ಲ 8.ಇದು ಯೋಜಿತ ಹೋರಾಟವಾಗಿರಲಿಲ್ಲ 9. ದೇಶೀಯ ರಾಜರು ಬ್ರಿಟಿಷರಿಗೆ ತೋರಿದ ನಿಷ್ಠೆ 10. ಸಿಪಾಯಿಗಳು ಮಾಡಿದ ಲೂಟಿ, ದರೋಡೆಗಳು

**2) ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಲಗಂಗಾಧರ ತಿಲಕರ ಪಾತ್ರವನ್ನು ವಿವರಿಸಿ**

* ತೀವ್ರವಾದಿಗಳಲ್ಲಿ ತಿಲಕರು ಅತ್ಯಂತ ಪ್ರಮುಖರು
* ಬಂಗಾಳದ ವಿಭಜನೆಯನ್ನು ಖಂಡಿಸಿದರು
* ತಿಲಕರು ಗಣೇಶ ಹಬ್ಬ ಮತ್ತು ಶಿವಾಜಿ ಜಯಂತಿ ಮೂಲಕ ಜನರನ್ನು ಸಂಘಟಿಸಿದರು
* "ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು; ಅದನ್ನು ಪಡೆದೆ ಪಡೆಯುತ್ತೇನೆ" ಎಂದು ಘೋಷಿಸಿದರು
* ಕೇಸರಿ ಮತ್ತು ಮರಾಠ ಪತ್ರಿಕೆಗಳನ್ನು ಆರಂಭಿಸಿದರು
* ಇವರ ಕ್ರಾಂತಿಕಾರಿ ಬರವಣಿಗೆಗಳು ಜನರನ್ನು ಕೆರಳಿಸಿದವು.
* ಪರಿಣಾಮವಾಗಿ ಬ್ರಿಟಿಷ್ ಸರ್ಕಾರವು ತಿಲಕರನ್ನು ಬಂಧಿಸಿತು.
* ಜೈಲಿನಲ್ಲೇ "ಗೀತಾ ರಹಸ್ಯ" ಎಂಬ ಗ್ರಂಥವನ್ನು ರಚಿಸಿದರು

**3) ಸ್ವಾತಂತ್ರ್ಯ ಹೋರಾಟದಲ್ಲಿ ಸುಭಾಷ್ ಚಂದ್ರ ಬೋಸ್ ಸಾಧನೆ/ಪಾತ್ರವನ್ನು ವಿವರಿಸಿ.**

* ಉನ್ನತ ಹುದ್ದೆ ತ್ಯಜಿಸಿ ಸ್ವಾತಂತ್ರ್ಯ ಚಳುವಳಿಗೆ ಧುಮುಕಿದರು.
* 1934 ರಲ್ಲಿ ಸಮಾಜವಾದಿ ಪಕ್ಷ ಸ್ಥಾಪಿಸಿದರು
* ಗಾಂಧೀಜಿಯವರ ಕಾರ್ಯವಿಧಾನ ಇವರಿಗೆ ಇಷ್ಟವಾಗಲಿಲ್ಲ
* "ಫಾರ್ವರ್ಡ್ ಬ್ಲಾಕ್" ಹೊಸ ಪಕ್ಷವನ್ನು ಸ್ಥಾಪಿಸಿದರು.
* ಬ್ರಿಟಿಷರ ಗೃಹ ಬಂಧನದಿಂದ ತಪ್ಪಿಸಿಕೊಂಡು ಜರ್ಮನಿಗೆ ತೆರಳಿದರು.
* ಜಪಾನ್ ಸಹಾಯದಿಂದ ಐ.ಎನ್.ಎ ಸೈನ್ಯ ಸಂಘಟಿಸಿದರು
* ದೆಹಲಿ ಚಲೋ ಎಂದು ನೇತಾಜಿ ಕರೆ ಕೊಟ್ಟರು
* "ನನಗೆ ನಿಮ್ಮ ರಕ್ತ ಕೊಡಿ, ನಾನು ನಿಮಗೆ ಸ್ವಾತಂತ್ರ್ಯ ತಂದು ಕೊಡುತ್ತೇನೆ" ಎಂಬ ಕರೆಯಿತ್ತರು
* ಆಕಸ್ಮಿಕವಾಗಿ ವಿಮಾನ ಅಪಘಾತದಲ್ಲಿ ಮರಣ ಹೊಂದಿದರು.

**4) ಗೋವಾವನ್ನು ಪೋರ್ಚುಗೀಸರಿಂದ ಮುಕ್ತಗೊಳಿಸಲಾಯಿತು, ಹೇಗೆ?**

* ಗೋವಾ ಭಾರತಕ್ಕೆ ಸೇರಬೇಕೆಂದು ನಿರಂತರವಾದ ಚಳುವಳಿ ನಡೆಯಿತು * ಪೋರ್ಚುಗೀಸರು ಯುರೋಪ್ ಮತ್ತು ಆಫ್ರಿಕಾದಿಂದ ಸೈನ್ಯವನ್ನು ತರಿಸಿ ಚಳುವಳಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು. * 1955 ರಲ್ಲಿ ಭಾರತದ ವಿವಿಧ ಭಾಗಗಳಿಂದ ಬಂದ ಸತ್ಯಾಗ್ರಹಿಗಳು ಗೋವಾ ವಿಮೋಚನಾ ಹೋರಾಟ ಪ್ರಾರಂಭಿಸಿದರು. * 1961 ರಲ್ಲಿ ಭಾರತದ ಸೈನ್ಯ ಮಧ್ಯ ಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು. * 1971 ರವರೆಗೂ ಕೇಂದ್ರಾಡಳಿತ ಪ್ರದೇಶವಾಗಿದ್ದ ಗೋವಾ ನಂತರ ರಾಜ್ಯವಾಯಿತು

**5) ಭಾರತ ಒಕ್ಕೂಟಕ್ಕೆ ಬೇರೆಲ್ಲ ಸಂಸ್ಥಾನಗಳವಿಲೀನಕ್ಕಿಂತ ಕಾಶ್ಮೀರದ ವಿಲೀನವು ವಿಶಿಷ್ಟವಾಗಿದ ಹೇಗೆ?**

* ರಾಜ ಹರಿಸಿಂಗ್ ಸ್ವಾತಂತ್ರ ವಾಗಿ ಉಗಳಿಯಲು ನಿರ್ಧರಿಸಿದನು. * ಕಾಶ್ಮೀರವು ಭಾರತಕ್ಕೆ ಸೇರಿಬಿಡಬಹುದೆಂಬ ಆತಂಕ. * ಪಾಕಿಸ್ತಾನ ಮುಸ್ಲಿಂ ಬುಡಕಟ್ಟು ಜನರಿಂದ ದಾಳಿಗೆ ಪ್ರಚೋದಿಸಿತು.* ಶೇಕ್‌ಅಬ್ದುಲ್ಲನ ನ್ಯಾಷನಲ್ ಕಾನ್ಫರೆನ್ಸ ಪಕ್ಷವು ಭಾರತಕ್ಕೆ ಸೇರಲು ಉತ್ಸುಕವಾಗಿತ್ತು. * ರಾಜಹರಸಿಂಗನು ಭಾರತ ಸರ್ಕಾರದ ಸಹಾಯ ಕೇಳಿದನು. * ಭಾರತೀಯ ಸೈನ್ಯ ಮಧ್ಯಪ್ರವೇಸಿಸಿ 1949 ರಲ್ಲಿ ಕಾಶ್ಮೀರವು ವಿಲೀನವಾಯಿತು.

**6) 2ನೇ ಮಹಾಯುದ್ಧದ ಪರಿಣಾಮಗಳಾವುವು?**

* ಅಪಾರ ಸಾವು–ನೋವು ಉಂಟಾಯಿತು * ರಾಜಕೀಯ ಮತ್ತು ಸಾಮಾಜಿಕ ಸಂರಚನೆ ಬದಲಾಯಿತು.* ವಸಾಹತುಗಳು ಸ್ವಾತಂತ್ರ ಪಡೆಯಲು ಪೂರಕವಾಯಿತು. * ವಿಶ್ವಸಂಸ್ಥೆ ಸ್ಥಾಪನೆಯಾಯಿತು. * ಬ್ರಿಟನ್, ಫ್ರಾನ್ಸ್ ತಮ್ಮ ವಸಾಹತುಗಳನ್ನು ಕಳೆದುಕೊಂಡವು. * ಶೀತಲ ಸಮರಕ್ಕೆ ನಾಂದಿಯಾಯಿತು ವಿಜೇತ ದೇಶಗಳಿಗೆ ಭದ್ರತಾ ಸಮಿತಿಯಲ್ಲಿ ಖಾಯಂ ಸ್ಥಾನ. * ಭಾರತ ಸ್ವಾತಂತ್ರ್ಯಗಳಿಸಲು ಸಹಕಾರಿಯಾಯಿತು. * ಅಮೇರಿಕಾ ಮತ್ತು ರಷ್ಯಾ ನೇತೃತ್ವದಲ್ಲಿ 2 ಶಕ್ತಿ ಬಣಗಳಾದವು * ಅಣ್ವಸ್ತ್ರ ಪೈಪೋಟಿಗೆ ದಾರಿಯಾಯಿತು

**7. ಭಾರತದ ಸಂಪನ್ಮೂಲಗಳನ್ನು ಬ್ರಿಟನ್ ಹೇಗೆ ಎರಡನೇ ಮಹಾಯುದ್ಧದಲ್ಲಿ ಉಪಯೋಗಿಸಿಕೊಂಡಿತು?**

* ಭಾರತೀಯ ಸಂಪನ್ಮೂಲಗಳು ಮತ್ತು ಸಿಪಾಯಿಗಳು, ಮಿತ್ರರಾಷ್ಟಗಳು ಯುದ್ಧದಲ್ಲಿ ಜಯಗಳಿಸಲು ಸಹಾಯವಾದವು. * ಈ ಯುದ್ಧಕ್ಕಾಗಿ ಬ್ರಿಟನ್ ಭಾರತೀಯ ಕೃಷಿ ಮತ್ತು ಕೈಗಾರಿಕಾ ವಸ್ತುಗಳನ್ನು ಉಪಯೋಗಿಸಿಕೊಂಡಿತು. * ಯುದ್ಧ ಸಾಮಗ್ರಿಗಳನ್ನು ಉತ್ಪಾದಿಸಲು ಆರ್ಡಿನೆನ್ಸ್ ಕಾರ್ಖಾನೆಗಳನ್ನು ಮೇಲ್ದರ್ಜೆಗೇರಿಸಿತು. * ಹೊಸ ತಂತ್ರಗಾರಿಕೆಯನ್ನು ಅಳವಡಿಸಿಕೊಂಡಿತು. * ಇದರಿಂದಾಗಿ ಭಾರತೀಯ ಸೇನೆಯು ಗುಣಾತ್ಮಕ ಮತ್ತು ದೊಡ್ಡ ಗಾತ್ರದ ಯುದ್ಧ ಸಾಮಗ್ರಿಗಳನ್ನು ಪಡೆದುಕೊಂಡಿತು.* ಭಾರತೀಯ ಸೇನೆಯು ಜರ್ಮನಿಯ ಸೈನ್ಯವನ್ನು * ಸೋಲಿಸುವುದರಲ್ಲಿ ಪ್ರಧಾನ ಪಾತ್ರವಹಿಸಿತು.

**ನೆನಪಿನಲ್ಲಿಡಿ:** * ಭಾರತದ ಪ್ರಥಮ ಗೃಹಮಂತ್ರಿ /ಭಾರತದ ದೇಶೀಯ ಸಂಸ್ಥಾನಗಳ ವಿಲೀನೀಕರಣಗೊಳಿಸಿದವರು/ ಭಾರತದ ಉಕ್ಕಿನ ಮನುಷ್ಯ– **ಸರ್ದಾರ್ ವಲ್ಲಭಭಾಯಿ ಪಟೇಲ್**
* ರಾಜ್ಯ ಪುನರ್ವಿಂಗಡಣಾ ಆಯೋಗದ ಅಧ್ಯಕ್ಷರು : **ಫಜಲ್ ಅಲಿ**
* "ಜಾತ್ಯತೀತ" ಮತ್ತು "ಸಮಾಜವಾದಿ" ಎಂಬ ಪದಗಳನ್ನು ಸಂವಿಧಾನಕ್ಕೆ ಸೇರ್ಪಡೆಗೊಳಿಸಿದ ತಿದ್ದುಪಡಿ – **42 ನೇತಿದ್ದುಪಡಿ**

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ), ವಿಜಯನಗರ (ಜಿಲ್ಲೆ) ಮೊ: 9916567120


ಸಾಯಿಮಣಿ ಪ್ರಕಾಶನ, ಹೊಸಪೇಟೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
HAMPI TIMES
BOOK YOUR ADVERTISEMENTS
TO REACH MORE AUIDIENCE

Classified Advertisements
Examples: Job postings, Real estate listings , Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94486 33038
Email:- hampitimes@gmail.com

# ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

## ಬೆಳಕಿನ ಹಾದಿ


ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬರವಣಿಗೆ ಅಷ್ಟು ಸುಲಭವೇ?



ಮನೆಯ ಅಷ್ಟು ಕೆಲಸಗಳ ಮಧ್ಯದಲ್ಲಿ ಅದು ಹೇಗೆ ಬರೆಯಲು ಸಮಯ ಹೊಂದಿಸಿಕೊಳ್ಳುತ್ತೀಯಾ ಎಂದು ಹಲವಾರು ಜನ ನನ್ನನ್ನು ಕೇಳುತ್ತಾರೆ. ಏನನ್ನಾದರೂ ಸಾಧಿಸಲೇಬೇಕೆಂಬ ಮನಸ್ಸಿದ್ದರೆ ಯಾವ ಕೆಲಸವೂ ಅಸಾಧ್ಯವಲ್ಲ ಎಂಬುದು ಎಲ್ಲರಿಗೂ ಗೊತ್ತಿರುವ ವಿಷಯ.ತುಸು ಸಮಯದ ಹೊಂದಾಣಿಕೆ, ಮುಖ್ಯ ವಿಷಯಗಳನ್ನು ಅಮುಖ್ಯ ವಿಷಯಗಳಿಂದ ಬೇರ್ಪಡಿಸಿ ಕಾರ್ಯನಿರ್ವಹಿಸುವ ಮೂಲಕ ಸಮಯವನ್ನು ಉಳಿಸಿ ನಮ್ಮ ನೆಚ್ಚಿನ ಹವ್ಯಾಸಗಳಲ್ಲಿ ನಮ್ಮನ್ನು ನಾವು ತೊಡಗಿಸಿಕೊಳ್ಳಬಹುದು ಅಂತೆಯೇ

ಬರೆಯುವ ಕೆಲ ಸದುಪಾಯಗಳನ್ನು ನಾನು ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ.

ಸಾಕಷ್ಟು ಓದುವ ಹವ್ಯಾಸವನ್ನು ರೂಡಿಸಿಕೊಳ್ಳಬೇಕು. ಒಳ್ಳೆಯ ಓದು ನಮ್ಮನ್ನು ಉತ್ತಮ ಚಿಂತನೆಗೆ ಒಡ್ಡುತ್ತದೆ. ವಿಭಿನ್ನ ವಿಷಯಗಳನ್ನು ಅರ್ಥೈಸಿಕೊಳ್ಳುವ ವಿಭಿನ್ನ ದೃಷ್ಟಿಕೋನಗಳನ್ನು ನಮಗೆ ತೋರುತ್ತದೆ.

ನಮ್ಮ ಸುತ್ತಣ ಸಮಾಜದ ಆಗುಹೋಗುಗಳ ಕುರಿತು ಒಂದು ಸೂಕ್ಷ್ಮ ಅವಲೋಕನ ನಮ್ಮದಾಗಿರಬೇಕು. ಯಾವುದನ್ನೂ ನಿರ್ಣಯಾತ್ಮಕವಾಗಿ ಪರೀಕ್ಷಿಸದೆ ವಸ್ತು ಸ್ಥಿತಿಯನ್ನು ಅಧ್ಯಯನ ಮಾಡಬೇಕು. ಬೇರೆಯವರು ಇರುವ ಪರಿಸ್ಥಿತಿಯನ್ನು ಅರ್ಥೈಸಿಕೊಳ್ಳುವ, ಅವರು ಎದುರಿಸುವ ಸಮಸ್ಯೆಗಳನ್ನು ಸವಾಲುಗಳನ್ನು, ಸಂತಸಗಳನ್ನು, ದುಃಖ ದಾರಿದ್ರ್ಯಗಳ ಸೂಕ್ಷ್ಮ ಅವಗಾಹನೆಯನ್ನು ಹೊಂದಿರಬೇಕು. ಸಾಮಾಜಿಕ ಸಮಸ್ಯೆಗಳತ್ತ ವಸ್ತುನಿಷ್ಠವಾಗಿಯೂ ಮತ್ತು ಭಾವನಾತ್ಮಕವಾಗಿಯೂ ಯೋಚಿಸುವ ಮನಸ್ಥಿತಿಯನ್ನು ಹೊಂದಿರಬೇಕು.

ಒಂದು ನೈಜವಾದ ಪದ ಮತ್ತು ವಾಕ್ಯದಿಂದ ಒಂದು ಇಡೀ ಲೇಖನವನ್ನು ಸಿದ್ಧಪಡಿಸಬಹುದು. ದೈನಂದಿನ ಕೆಲಸಗಳನ್ನು ಮಾಡುತ್ತಿರುವಾಗ ಪೇಪರ್ ಓದುವಾಗ ಯಾವುದೋ ಹಾಡು ಕಿವಿಗೆ ಬಿದ್ದಾಗ, ಚಲನಚಿತ್ರದ ಯಾವುದೋ ಒಂದು ಸಂಭಾಷಣೆಯ ಪದ ಇಲ್ಲವೇ ಆ ಹಾಡಿನ ಒಂದು ಸಾಲು ನಮ್ಮ ಮನಕ್ಕೆ ಕವಿದ ಮಬ್ಬನ್ನು ಹೊಡೆದೋಡಿಸಿ ನಮ್ಮನ್ನು ಚಿಂತನೆಗೆ ಒಡ್ಡುತ್ತದೆ. ಅದರ ಕುರಿತೇ ಮನ ಧೇನಿಸತೊಡಗುತ್ತದೆ. ಲೇಖನದ ಶೀರ್ಷಿಕೆ ತಂತಾನೆ ಒಡ ಮೂಡುತ್ತದೆ. ಮತ್ತೆ ಕೆಲ ಬಾರಿ ಇಡೀ ಲೇಖನವನ್ನು ಬರೆದ ನಂತರ ಶೀರ್ಷಿಕೆಯನ್ನು ಬದಲಿಸಬೇಕಾಗಬಹುದು.

ಸಂಪೂರ್ಣ ಲೇಖನದ ಚಿತ್ರಣ ನಿಮ್ಮ ಮನದಲ್ಲಿ ಮೂಡುವವರೆಗೂ ಕಾಯಬೇಡಿ... ಮನದಲ್ಲಿ ಮೂಡಿದ ಭಾವನೆಗಳನ್ನು ಲೇಖನಿಯ ಮೂಲಕ ಕಾಗದದಲ್ಲಿ ಮೂಡಿಸುತ್ತಾ ಹೋಗಿ. ಲೇಖನ ತುಂಬಾ ಚೆನ್ನಾಗಿ ಮೂಡಿ ಬರುತ್ತಿದೆ ಎನ್ನಿಸುವಾಗ ನಿಲ್ಲಿಸಿ ಏನು ಮಾಡಬೇಕೆಂದು ಯೋಚಿಸಿ. ಮತ್ತೊಮ್ಮೆ ಮೊದಲಿನಿಂದ ಆ ಲೇಖನವನ್ನು ಓದಿ. ಹೀಗೆ ಮಾಡಿದಾಗ ನೀವು ಬರೆಯುವಾಗ ನಿಮಗುಂಟಾಗುವ ತಡೆಗಳನ್ನು ನಿವಾರಿಸಿ ಕೊಳ್ಳಬಹುದು. ತುಸು ಹೆಚ್ಚೇ ಲೇಖನವನ್ನು ಬರೆದು ಕೊನೆಯ ಭಾಗವನ್ನು ಹಾಗೆಯೇ ಉಳಿಸಿದಾಗ ಮರುದಿನ ಮತ್ತಷ್ಟು ಉತ್ಸಾಹ ದಿಂದ ಅದನ್ನು ಬರೆಯಬಹುದು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

ಬಾವಿಯಲ್ಲಿ ತುಸು ನೀರನ್ನು ಉಳಿಸಿ ಮರುದಿನ ಮತ್ತೆ ಅದೇ ಸಮಯಕ್ಕೆ ನೈಸರ್ಗಿಕವಾಗಿ ಆ ಬಾವಿಯಲ್ಲಿ ನೀರು ತುಂಬಿಕೊಳ್ಳುವಂತೆ ನಿಮ್ಮ ಬರವಣಿಗೆಯ ಬಾವಿಯ ಸೆಲೆ ಎಂದೂ ಬತ್ತದಂತೆ ಕಾಯ್ದುಕೊಳ್ಳಿ. ನಿಮ್ಮ ಮೆದುಳಿಗೆ ಮತ್ತು ಕೈಗಳಿಗೆ ತುಸು ವಿಶ್ರಾಂತಿ ದೊರೆತಾಗ ಮತ್ತಷ್ಟು ಚೈತನ್ಯವನ್ನು ಹೊಂದುವ ಮೂಲಕ ಬರೆಯಿರಿ.

ಪ್ರತಿ ಬಾರಿಯೂ ಒಂದಷ್ಟು ಬರೆದ ಮೇಲೆ ಮತ್ತೆ ನೀವು ಬರೆದ ಬರಹವನ್ನು ಪುನರಾವಲೋಕನ ಮಾಡಿ. ಕೆಲ ದಿನಗಳ ನಂತರವೂ ನಿಮ್ಮ ಬರಹಗಳನ್ನು ಮತ್ತೆ ಪರಿಶೀಲನಾತ್ಮಕವಾಗಿ ಓದಿ. ಇದು ನಿಮ್ಮ ಬರವಣಿಗೆಯನ್ನು ಉತ್ತಮಗೊಳಿಸಲು ಮತ್ತು ನಿರಂತರತೆಯನ್ನು ಕಾಯ್ದುಕೊಳ್ಳಲು ಸಹಾಯಕವಾಗುತ್ತದೆ.

ನಿಮ್ಮ ಲೇಖನಗಳಲ್ಲಿ ಭಾವನೆಗಳನ್ನು ವಿವರಿಸಬೇಡಿ. ಲೇಖನವನ್ನು ಓದುವಾಗ ಭಾವನೆಗಳು ತನ್ನಿಂತಾನೇ ಉದ್ಭವಿಸಬೇಕು. ಅಂತಹ ಲೇಖನ ನಿಮ್ಮದಾಗಿರಲಿ. ಪತ್ರಿಕೆಗಳು ಕೂಡ ವಾಸ್ತವ ವಿಷಯಗಳನ್ನು ಭಾವನೆಗಳ ಮೂಲಕವೇ ವ್ಯಕ್ತಪಡಿಸುತ್ತವೆ. ನಿಜವಾದ ಭಾವನೆಗಳನ್ನು ಸತ್ಯ ಹಾಗೂ ಸತ್ವಪೂರ್ಣವಾಗಿ ವ್ಯಕ್ತಪಡಿಸಲು ನೈಜ ಬರವಣಿಗೆಯಿಂದ ಮಾತ್ರ ಸಾಧ್ಯವಾಗುತ್ತದೆ.

ಕಾಗದದಲ್ಲಿ ಲೇಖನಗಳನ್ನು ಬರೆದರೆ ಪೆನ್ಸಿಲ್ನಿಂದ ಬರೆಯಿರಿ... ಹಾಗೆ ಬರೆಯುವಾಗ ನೀವು ಎರಡನೇ ಬಾರಿ ಓದುವಾಗ ತಪ್ಪಿದ್ದಲ್ಲಿ ಇರೇಜರನಿಂದ ಅಳುಕಿಸಿ ತಿದ್ದಿ ಬರೆಯಲು ಅನುಕೂಲ. ಮೊಬೈಲ್ ನಲ್ಲಿ ಟೈಪ್ ಮಾಡುವಾಗ ವಾಯ್ಸ್ ಆಪ್ ನಲ್ಲಿ ಬರೆಯುವಾಗ ತುಸು ಜಾಗರೂಕತೆ ಇರಬೇಕು. ಸಂಪೂರ್ಣ ಲೇಖನವನ್ನು ಬರೆದ ಮೇಲೆ ಮತ್ತೊಮ್ಮೆ ಮರು ಪರಿಶೀಲಿಸಿ ತಪ್ಪಿದ್ದಲ್ಲಿ ತಿದ್ದಬೇಕು.

ಕೈಯಲ್ಲಿ ಲೇಖನಿ ಹಿಡಿದು ಬರೆಯುವುದು ತುಸು ಹೆಚ್ಚು ಆರಾಮದಾಯಕ ಟೈಪ್ ಮಾಡುವಾಗ, ಪ್ರೂಫ್ ತಯಾರು ಮಾಡುವಾಗ ಅತ್ಯಂತ ಅನುಕೂಲಕರ. ಇದರ ಜೊತೆಗೆ ಕೈಯನ್ನು ಬಳಸಿ ಬರೆಯುವಾಗ ಹೊಸ ವಿಷಯಗಳ ಕುರಿತು ಚಿಂತನೆ ಮಾಡಲು ಅವುಗಳನ್ನು ಸೂಕ್ಷ್ಮವಾಗಿ ಬಳಸಲು ಅನುಕೂಲ.

ವಿಷಯವನ್ನು ಚಿಕ್ಕದಾಗಿ ಚೊಕ್ಕದಾಗಿ ಬರೆಯಲು ರೂಡಿಸಿಕೊಳ್ಳಬೇಕು. ಭೌತಶಾಸ್ತ್ರದ ನಿಯಮಗಳಂತೆ ಗದ್ಯದ ನಿಯಮಗಳನ್ನು ಬದಲಾಯಿಸಲು ಸಾಧ್ಯವಿಲ್ಲ.

ಗದ್ಯದ ಪ್ರತಿಯೊಂದು ಪದವು ತನ್ನದೇ ಆದ ವಿಶಿಷ್ಟತೆಯನ್ನು ಹೊಂದಿರುತ್ತದೆ. ವ್ಯಕ್ತಿ ಚಿತ್ರಣವನ್ನು ಬರೆಯುವಾಗ ಅನಿವಾರ್ಯವಿಲ್ಲದ ಹೊರತು ಇಸವಿಗಳನ್ನು ಕೈ ಬಿಟ್ಟು ವ್ಯಕ್ತಿಯ ಸಾಧನೆ ವ್ಯಕ್ತಿತ್ವದ ಚಿತ್ರಣಕ್ಕೆ ಅವಕಾಶ ಕೊಡಿ. ಒಂದೆರಡು ಮುಖ್ಯ ಸಂಗತಿಗಳನ್ನು ಬರೆಯುವ ಮೂಲಕ ಅವರ ವ್ಯಕ್ತಿತ್ವವನ್ನು ಅನಾವರಣಗೊಳಿಸಿ.

ಅವರ ಬಾಲ್ಯ ಪಾಲಕರು ಮತ್ತು ಬೆಳೆದು ಬಂದ ವಾತಾವರಣ ಅವರ ವ್ಯಕ್ತಿತ್ವ ನಿರ್ಮಾಣದಲ್ಲಿ ವಹಿಸಿದ ಪಾತ್ರ ಮುಖ್ಯ ಎಂಬುದನ್ನು ನೆನಪಿನಲ್ಲಿಟ್ಟು ಒಂದೊಂದಾಗಿ ವಿಷದೀಕರಿಸಿ ಬರೆಯಿರಿ.

ಸರಳ, ಶುದ್ಧ ಮತ್ತು ಗೌರವಯುತವಾದ ಭಾವನೆಗಳನ್ನು ಲೇಖನದ ಮೂಲಕ ಮೂಡಿಸಲು ಪ್ರಯತ್ನಿಸಿದಾಗ ಅತ್ಯುತ್ತಮ ಲೇಖನವಾಗಿ ಅದು ಹೊರಹೊಮ್ಮುತ್ತದೆ. ಬರೆಯಲು ಪ್ರಯತ್ನಿಸಿ.... ಯಶಸ್ವಿಯಾಗಿ.

# ನೆಲದ ನೋವಿಗೆ ಧ್ವನಿಯಾದ ಪ್ರತಿಬಿಂಬವೇ ಬಿಸಿಲ ಮಳೆ

ನೆಲಮೂಲದ ಸಾಹಿತ್ಯ ಯಾವಾಗಲೂ ಚಲನಶೀಲವಾಗಿರುತ್ತದೆ. ಅದು ನಿತ್ಯ ನೂತನ. ವರ್ತಮಾನದ ತಲ್ಲಣಗಳಿಗೆ ಮುಖಾಮುಖಿಯಾಗುವ ಅನೇಕ ಸಾಹಿತಿಗಳು ಈ ನೆಲದ ನೋವನ್ನು ತಮ್ಮದೇ ಆದ ರೀತಿಯಲ್ಲಿ ಬಿಂಬಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ನೆಲದ ನೋವಿನ ಪ್ರತೀಕವಾಗಿ ಹೊರಹೊಮ್ಮಿದ ಬಂಡಾಯ ಸಾಹಿತ್ಯ ತನ್ನದೇ ಆದ ಪ್ರಖರ ಬೆಳಕಿನ ಕಿರಣಗಳನ್ನು ಅಲ್ಲಲ್ಲಿ ಸೂಸಿದೆ. ಅದರ ಬೆಳಕು ಅನೇಕ ದಮನಿತರ ನೋವಿಗೆ ಔಷಧವಾಗಿದೆ ಎಂದರೆ ತಪ್ಪಿಲ್ಲ. ಅಂತಹ ಬೆಳಕಿನ ಕಿಡಿಗಳ ಕಾವ್ಯದ ಅವಲೋಕನವೇ 'ಬಿಸಿಲ ಮಳೆ'. ನೆಲಮೂಲದ ಅಭಿವೃದ್ಧಿಯ ಆಶಯವನ್ನಿಟ್ಟುಕೊಂಡ ಜೀವಪರ ಬರಹಗಾರ ಹಾಗೂ ಕವಿಯಾದ ಬಿ. ಶ್ರೀನಿವಾಸ ಅವರು ತಾವು ಕಂಡುಂಡ ಬಳ್ಳಾರಿಯ ಆಯ್ದ ಕವಿಗಳ ಕಾವ್ಯವನ್ನು ಇಲ್ಲಿ ಸಾದ್ಯಂತವಾಗಿ ವಿವರಿಸುವ ಪ್ರಯತ್ನ ಮಾಡಿದ್ದಾರೆ.

ಬಳ್ಳಾರಿ ಎಂದರೆ ಎರಡೇ ಕಾಲಗಳು ನೆನಪಾಗುತ್ತವೆ. ಒಂದು ಬೇಸಿಗೆ ಕಾಲ ಮತ್ತೊಂದು ಬಿರುಬೇಸಿಗೆ ಕಾಲ. ಇಲ್ಲಿ ಮಳೆ ಎಂಬುದು ಮರಳುಗಾಡಿನ ಓಯಸಿಸ್ ಇದ್ದಂತೆ. ಮಳೆಗಾಲದಲ್ಲಿ ಬಿದ್ದ ಮಳೆ ಬಿಸಿಲ ಝಳವನ್ನು ಹೊದ್ದುಕೊಂಡೇ ಸುರಿಯುತ್ತದೆ. ನೆಲದ ಕಾವನ್ನು (ಬಿಸಿಯನ್ನು) ಆರಿಸುವ ಮೊದಲೇ ತಣ್ಣಗಾಗುವ ಮಳೆ ಬದುಕನ್ನು ತಂಪುಗೊಳಿಸಿದ್ದು ಮಾತ್ರ ಕಡಿಮೆ ಎನ್ನಬಹುದು. ಆದಾಗ್ಯೂ ಬದುಕಿನ ಭರವಸೆಯನ್ನಂತೂ ಕುಂದಿಸಿಲ್ಲ. ಅಂತೆಯೇ ಅವಿಭಜಿತ ಬಳ್ಳಾರಿ ಜಿಲ್ಲೆಯಾದ್ಯಂತ ಜೀವಪರ ಕಾಳಜಿಯನ್ನಿಟ್ಟುಕೊಂಡು ಅನ್ಯಾಯ, ಅಕ್ರಮ, ಭ್ರಷ್ಟಾಚಾರಗಳ ವಿರುದ್ಧ ಗುಡುಗಿದ ಅನೇಕ ಕವಿಗಳ ಕಾವ್ಯಾವಲೋಕನದ ಸಾರವೇ 'ಬಿಸಲ ಮಳೆ'.



ಆರ್.ಬಿ.ಗುರುಬಸವರಾಜ
ಶಿಕ್ಷಕರು, ಹ.ಬೊ.ಹಳ್ಳಿ

Scan For Digital Colourful
HAMPI TIMES E-paper

ಬಿಸಿಲ ಝಳದ ನಂತರ ಬರುವ ಮಳೆ ಬದುಕಿಗೆ ಭರವಸೆಯನ್ನು ನೀಡುವಂತೆ ಇಲ್ಲಿನ ಕಾವ್ಯದ ಅವಲೋಕನವೂ ಸಹ ಸಾಹಿತ್ಯದ ಬದುಕಿಗೆ ಭರವಸೆಯನ್ನು ನೀಡಿದೆ. ಬಳ್ಳಾರಿ ಜಿಲ್ಲೆಯ ಪ್ರಮುಖ ಪಟ್ಟಣ ಹಾಗೂ ನಗರಗಳಿಂದ ಮಾತ್ರವಲ್ಲದೇ ಹಳ್ಳಿ-ಹಳ್ಳಿಗಳಲ್ಲೂ ಕಾವ್ಯದ ಕಿಚ್ಚು ಹಚ್ಚಿಕೊಂಡ ಅನೇಕ ಕವಿಗಳು ತಮ್ಮ ಪ್ರಖರವಾದ ಪದಗಳ ಬಾಣದಿಂದ ನಮ್ಮನ್ನಾಳುವವರನ್ನು ತಿವಿದು ಎಚ್ಚರಿಸಿರುವುದನ್ನು ಇಲ್ಲಿನ ಕವಿಗಳ ಕಾವ್ಯತ್ವ ತಿಳಿಸುತ್ತದೆ.

ಇಲ್ಲಿ ಹದಿನಾರು ಕವಿಗಳ ಕಾವ್ಯದ ಅವಲೋಕನವಿದೆ. ಹದಿನಾರು ಕವಿಗಳ ಬರಹಗಳು, ಚಳುವಳಿಗಳು, ಅವರ ಜೀವಪರವಾದ ಕಾಳಜಿಗಳು, ಬದುಕಿಗೆ ಬೇಕಾದ ಬದ್ಧತೆಗಳು, ಸೃಜನಶೀಲ ಸಾಹಿತಿಕ ಚಟುವಟಿಕೆಗಳು, ಹೋರಾಟಗಳು, ಅವರು ಎದುರಿಸಿದ ಸವಾಲುಗಳು, ದಮನಿತರ ಬದುಕಿಗೆ ನೀಡಿದ ಬೆಂಬಲ ಗಳು, ಬದುಕನ್ನು ಉನ್ನತಿಗೊಳಿಸಲು ನೀಡಿದ ಸಾಂಸ್ಕೃತಿಕ ಚೈತನ್ಯ ಗಳು, ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸಿ ಅವರ ಬರಹಗಳನ್ನು ಭಿತ್ತಿಚಿತ್ರಗಳಾಗಿ ಪ್ರಸ್ತುಪಡಿಸಿದ್ದಾರೆ.

ಜಾಗತೀಕರಣ, ಉದಾರೀಕರಣ, ಖಾಸಗೀಕರಣ, ಜಾತೀಕರಣ, ಧಾರ್ಮಿಕರಣ, ಹಿಗೆ ಹತ್ತು ಹಲವು ಕರಣಗಳನ್ನು ತಮ್ಮ ಕಾವ್ಯ, ಕಥೆ, ಕಾದಂಬರಿಗಳ ಮೂಲಕ ಖಂಡಿಸುತ್ತಾ, ಜನಪರ ಆಶಯಗಳನ್ನು ಬೆಂಬಲಿಸಲು ಪ್ರಯತ್ನಿಸಿದ ಎಸ್.ಎಸ್.ಹಿರೇಮಠ್, ಪರಶುರಾಮ ಕಲಾಲ, ಶೇಷಗಿರಿ ಹವಾಲ್ದಾರ್, ಪಿ.ಆರ್.ವೆಂಕಟೇಶ್, ಪೀರಬಾಷಾ, ಹುಲಿಕಟ್ಟಿ ಚನ್ನಬಸಪ್ಪ, ಮೇಟಿ ಕೊಟ್ರಪ್ಪ, ಹುರಕಡ್ಲಿ ಶಿವಕುಮಾರ, ಡಿ,ಬಿ.ಬಡಿಗೇರ, ಪಂಚಪ್ಪ ಮೇಷ್ಟ್ರು, ಚೆನ್ನಬಸವಣ್ಣ, ಕಾಟ್ರಹಳ್ಳಿ ಮಹಾಬಲೇಶ್ವರ, ಡಿ. ರಾಮ ನವಲಿ, ಇಸ್ಮಾಯಿಲ್ ಎಲಿಗಾರ್ ಮತ್ತು ಎಲ್. ಖಾದರ್ ಬಾಷಾ ಇವರುಗಳ ಕಾವ್ಯದ ಧ್ವನಿಯನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ.

ಲೇಖಕರು ತಮ್ಮ ನುಡಿಯಲ್ಲಿ ತಿಳಿಸಿದಂತೆ ಇದೊಂದು ಬಳ್ಳಾರಿ ಜಿಲ್ಲೆ ಆಯ್ದ ಕವಿಗಳ ಕಾವ್ಯಾವಲೋಕನ. ಆದರೆ ಇಲ್ಲಿರುವ ಎಲ್ಲರೂ ಎಡಪಂಥೀಯ ಚಳುವಳಿಗಳಲ್ಲಿ ತೊಡಗಿಸಿಕೊಂಡವರು ಎಂಬುದು ಗಮನಾರ್ಹ. ಹಾಗಾದರೆ ಬಳ್ಳಾರಿ ಜಿಲ್ಲೆಯಲ್ಲಿ ಇಷ್ಟೇ ಜನ ಮಾತ್ರ ಎಡ ಪಂಥೀಯ ಕವಿಗಳು ಇರುವರೇ? ಅನುಮಾನ ಕಾಡದಿರದು. ಆದರೆ ಲೇಖಕರು ತಮ್ಮಷ್ಟಕ್ಕೆ ತಾವೇ ಇಲ್ಲಿನ ಬರಹಕ್ಕೊಂದು ಮಿತಿಯನ್ನು ಹಾಕಿಕೊಂಡಿದ್ದಾರೆ. ಇದನ್ನು ಯಾಕೆ ಮೊಟಕುಗೊಳಿಸಿದ್ದಾರೋ ತಿಳಿಯದು. ಇನ್ನೂ ಸಾಕಷ್ಟು ಹೊಸ ತಲೆಮಾರಿನ ಕವಿಗಳೂ ಇಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. ಅವರ ಕಾವ್ಯತ್ವವನ್ನೂ ಇಲ್ಲಿ ಗಮನಿಸಬಹುದಾಗಿತ್ತು. ಬಹುಶಃ ಇದರ ಎರಡನೇಭಾಗದಲ್ಲಿಅದು ಸಾಕಾರಗೊಳ್ಳಬಹುದು.




ಇದು ಅಖಂಡ ಬಳ್ಳಾರಿಯ ಹದಿನಾರು ಕವಿಗಳ ಕಾವ್ಯದ ಇಣುಕು ನೋಟವಾದರೂ ಇಡೀ ಅಖಂಡ ಬಳ್ಳಾರಿಯ ಕವಿಗಳ ಕಾವ್ಯದ ಘಮಲನ್ನು, ತುಮುಲ ವನ್ನು, ತುಡಿತ-ಮಿಡಿತವನ್ನು ಹೊಂದಿದೆ. ಕಾವ್ಯಕ್ಕೆ ಬೇಕಾಗಿರುವ ಭಾಷೆ, ಶೈಲಿ, ತಂತ್ರಗಳನ್ನು ಸಾಮಾಜಿಕ ಬದುಕಿನೊಂದಿಗೆ ಹೇಗೆ ತಳುಕು ಹಾಕಬೇಕೆನ್ನುವ ಭವಿಷ್ಯದ ಕವಿಗಳಿಗೆ ಇದೊಂದು ಸಣ್ಣ ಕೈದೀವಿಗೆಯಾಗಲಿದೆ. ಚರಿತ್ರೆಯ ಸಮಾಜ ಮುಖಿ ದಿನಗಳ ನ್ನು 'ಬಿಸಿಲ ಮಳೆ'ಯಲ್ಲಿ ದಾಖಲಿಸುವ ಪ್ರಯತ್ನ ದಲ್ಲಿ ಬಿ. ಶ್ರೀನಿವಾಸ ಅವರು ಯಶಸ್ವಿಯಾಗಿ ದ್ದಾರೆ. ಬಿಸಿಲ ಝಳವನ್ನು ತಂಪಾಸುವ ಮಳೆ ಎಲ್ಲಡೆ ಸುರಿದು ಸಾಹಿತ್ಯದ ಬೆಳೆ ಹುಲುಸಾಗಲಿ ಎಂಬುದು ನಮ್ಮ ಆಶಯ. ಪುಸ್ತಕಕ್ಕಾಗಿ 9916332273 ಸಂಖ್ಯೆಗೆ ಸಂಪರ್ಕಿಸಿ.

**ಪುಸ್ತಕದ ಹೆಸರು : ಬಿಸಿಲ ಮಳೆ**
**ಲೇಖಕರು : ಬಿ. ಶ್ರೀನಿವಾಸ**
**ಪುಟಗಳು : 124**
**ಬೆಲೆ : 150/–**
**ಪ್ರಕಾಶಕರು : ತಳಮಳ ಪ್ರಕಾಶನ, ಕೊಪ್ಪಳ**
**ಪುಸ್ತಕ ಪರಿಚಯ**

**ಆರ್.ಬಿ.ಗುರುಬಸವರಾಜ.**
**ಹೊಳಗುಂದಿ**

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ತ್ಯಾಜ್ಯ ನಿರ್ವಹಣೆ

ಮನೆಯಿಂದಲೇ ತ್ಯಾಜ್ಯ ನಿರ್ವಹಣೆ
ನಡೆಯಲಿ ಅನುದಿನ ಕಸ ವಿಂಗಡಣೆ
ಶುಚಿತ್ವಕ್ಕೆ ಕೊಡೋಣ ಮನ್ನಣೆ
ತ್ಯಜಿಸುವ ಉಡಾಫೆಯ ಧೋರಣೆ

ಶುಚಿಯಾಗಿದ್ದರೆ ಸುತ್ತಲ ಪರಿಸರ
ನೋಡಲು ಅನುಪಮ ಸುಂದರ
ರೋಗ ರುಜಿನಗಳಿಂದ ಮುಕ್ತಿ
ಅರಿಯುವ ಕಸನಿರ್ವಹಣೆಯ ಯುಕ್ತಿ

ವಿಂಗಡಿಸುವ ಹಸಿ-ಒಣ ಕಸಗಳನು
ಕಲಿಯುವ ತ್ಯಾಜ್ಯ ನಿರ್ವಹಣೆಯ
ಸೂತ್ರವನು
ನೀಡುವ ಪೌರ ಕಾರ್ಮಿಕರಿಗೆ ಸಹಕಾರ
ಸ್ವಚ್ಛ ಭಾರತಕ್ಕೆ ಅವರ ಕೊಡುಗೆ ಅಪಾರ

– ಚೇತನ ಭಾರ್ಗವ, ಬೆಂಗಳೂರು

## ಆನಂದ ಬಾಣ






## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 15–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1612.65 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 7951 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 43.071 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1587.89 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 142 ಕ್ಯುಸೆಕ್ |
| ಸಾಮರ್ಥ್ಯ | 9.357 ಟಿಎಂಸಿ |

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

16–02–2025 – ಭಾನುವಾರ

| | |
|---|---|
| ತಿಥಿ | : ಚತುರ್ಥಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಹಸ್ತ |
| ಯೋಗ | : ಧೃತಿ |
| ಕರಣ | : ಭವ |
| ಸೂರ್ಯೋದಯ | : 06:59:51 |
| ಸೂರ್ಯಾಸ್ತ | : 18:22:23 |
| ರಾಹು ಕಾಲ | : 16:57–18:22 |
| ಯಮಘಂಡ ಕಾಲ | : 12:41–14:06 |
| ಗುಳಿಕ ಕಾಲ | : 15:32–16:57 |

ಭಾವಪೂರ್ಣ ಶ್ರದ್ಧಾಂಜಲಿ
ನಿಧನ - ಪುಣ್ಯ ಸ್ಮರಣೆ
ಜಾಹೀರಾತುಗಳಿಗೆ
ವಿಶೇಷ ರಿಯಾಯತಿ
ನಿಧನದ ಬಗ್ಗೆ ಕುಟುಂಬ, ಸ್ನೇಹಿತರು, ಮತ್ತು ಪರಿಚಿತರಿಗೆ ಶೀಘ್ರ ಮತ್ತು ಸರಿಯಾದ ಮಾಹಿತಿ ನೀಡಲು ಇದು ನೆರವಾಗುತ್ತದೆ.
ಜಾಹೀರಾತು ನೀಡಲು ಸಂಪರ್ಕಿಸಿ
ಹಂಪಿ ಟೈಮ್ಸ್
94486 33038

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಹಿಡಿಯಷ್ಟು ಪ್ರೀತಿ ಬೇಕಾಗಿದೆ ಈ ಬದುಕಿಗೆ

**ಪ್ರೀತಿ ಇಲ್ಲದೆ ಮೇಲೆ ಹೂವು ಅರಳೀತು ಹೇಗೆ ?**
**(ಜಿ ಎಸ್ ಎಸ್)**
**ಮೋಡ ಬಿರಿದು ಮಳೆ ಬಂದೀತು ಹೇಗೆ..?**
**ನೆಲ ಹಸಿರಾಗಿ ಜಗದ ಉಸಿರಾಗಿ**
**ಬಸಿರ ತುಂಬೀತು ಹೇಗೆ..?.**

ಈ ಹಿಂದೆ ಈ ಪ್ರೀತಿಯ ಬಗ್ಗೆ ಸಾಕಷ್ಟು ಬಾರಿ ಬರೆದಿದ್ದರೂ, ಪ್ರೀತಿ ಎನ್ನುವ ಆ ಎರಡಕ್ಷರ ಕಿವಿಗೆ ಬಿದ್ದಾಕ್ಷಣ ಅದೇನೊ ಒಂದು ರೀತಿಯ ಉಮ್ಮಸ್ಸು, ಒಂದು ರೀತಿಯ ಲವಲವಕೆ, ಹಾಗೆ ಮೈ ಉಬ್ಬಿ ಬಿಡುತ್ತದೆ, ಮೊಗದಲ್ಲಿ ಹೂವು ನಗೆ ತಾನಾಗಿಯೇ ಅರಳುತ್ತದೆ, ಅದು ಒಂದು ರೀತಿಯ ಉನ್ಮಾದ, ಪ್ರೇರಕ ಶಕ್ತಿ, ಬದುಕ ಬಯಸುವ ಪ್ರತಿಯೊಬ್ಬರಿಗೂ ಪೂರಕ ಶಕ್ತಿ. ಅದಕ್ಕೆ ಹೂವಿನಂತ ಮನಸ್ಸಿನ ಕವಿ ಜಿ ಎಸ್ ಶಿವರುದ್ರಪ್ಪ ಅವರ "ಪ್ರೀತಿ ಇಲ್ಲದ ಮೇಲೆ" ಕವನದಲ್ಲಿ"ಪ್ರೀತಿ ಇಲ್ಲದೆ ಹೂವು ಅರಳೀತು ಹೇಗೆ ? ಎನ್ನುತ್ತ ತಮ್ಮ ಉತ್ಕಟವಾದ ಪ್ರೀತಿಯ ಬಯಕೆಯನ್ನು ವ್ಯಕ್ತಪಡಿಸಿದ ಪರಿಯಂತೂ ಬದುಕ ಬಯಸುವ ಪ್ರತಿಯೊಬ್ಬರಿಗೂ ಅಮರಗೀತೆ ಮತ್ತು ಅವರ ಕವನದಲ್ಲಿನ ಸಹಜ ಮಾನವೀಯ ಆತಂಕದ ಛಾಯೆಯನ್ನು ಜೊತೆಗೆ ಒಂದಿಷ್ಟು ಪ್ರಶ್ನೆಗಳನ್ನು ತಮ್ಮೊಂದಗೆ ತಾವೆ ಹೇಳಿಕೊಳ್ಳುವ, ಹೇಳಿಕೊಳ್ಳುತ್ತ ನಿಜವಾದ ಪ್ರೀತಿಯ ವ್ಯಾಪ್ತಿ ಮತ್ತು ವಿಸ್ತಾರ ಹಾಗು ಅದರ ವ್ಯಾಪಕತೆ ಬಗ್ಗೆ ಓದುಗರಿಗೆ ಆಪ್ತವಾಗುವಂತೆ ದರ್ಶಿಸುತ್ತಾರೆ. ಅವರ ವಿಶಿಷ್ಟವಾದ ಒಳಗಣ್ಣುಗಳ ಪ್ರೀತಿ ಎನ್ನುವ ಈ ಹೊಳಪನ್ನು ನಿತ್ಯ ಜೀವನದಲ್ಲಿ ಪ್ರತಿ ಯೊಬ್ಬರೂ ಕಾಣಬೇಕಾಗಿದೆ. ಅವರಂತೆ ಪರಮ ಪವಿತ್ರವಾದ ಪ್ರೀತಿಯ ವ್ಯಾಪಕತೆಯನ್ನು ಅರ್ಥಮಾಡಿ ಕೊಳ್ಳಬೇಕಾಗಿದೆ. ಪ್ರತಿಯೊಂದೂ ಕೈಂಕರ್ಯದಲ್ಲಿಯೂ ಅದರ ಲೇಪನವನ್ನು ಕಾಣಬೇಕಾಗಿದೆ.

ಪ್ರತೀ ವರ್ಷ ಬರುವ ಪ್ರೇಮಿಗಳ ದಿನ ಕೇವಲ ತರುಣ–ತರುಣಿಯರ ಪ್ರೀತಿ–ಪ್ರೇಮಗಳಿಗೆ ಸೀಮಿತ ವಾಗದೆ ಕೇವಲ ತರುಣ–ತರುಣಿಯರ ನಡುವಿನ ಪ್ರೀತಿ ವಿಜ್ರಮಿಸದೆ, ಈ ಪ್ರೀತಿ ಪ್ರೇಮ ಕೇವಲ ಗಂಡು ಹೆಣ್ಣುಗಳ ನಡುವಿನ ಒಲವಿಗೆ ಮಾತ್ರ ಸೀಮಿತವಾಗದೆ, ಇದೊಂದು ಅವಿರತವಾದ ಪ್ರಯತ್ನವಾಗಬೇಕು, ಎಂದೂ ಮುಗಿಯದ ಒಲವಿನ ಚಿಲುಮೆಯಾಗಬೇಕು, ಅನಂತದ ಬಾವಲಹರಿ ಯಾಗಿ ಅದೊಂದು ಅನಂತದೆಡಿಗಿನ ಬಾವಯಾನ ವಾಗಬೇಕು, ಪ್ರತಿಯೊಬ್ಬರ ಜೀವನದ ಭರವಸೆಯ ಬೆಳಕಾಗಬೇಕು, ಪ್ರತಿಯೊಬ್ಬರ ಬವಿತವ್ಯದ ಸುಂದರ ವಾದ ಕನಸಾಗಬೇಕು, ನಮ್ಮೆಲ್ಲರ ದೃಷ್ಟಿಗೂ ಮೀರಿದ ಅದರಾಚಿನ ಸೃಷ್ಟಿಯ ನಿಜ ಸೌಂದರ್ಯವಾಗಬೇಕು. ಹೇಗೆ ಪ್ರಕೃತಿ ಯಲ್ಲಿನ ವಿವಿಧ ಚರಾಚರ ವಸ್ತುಗಳಾದಿಯಾಗಿ ಪಶು ಪಕ್ಷಿ ಜೀವ ನಿರ್ಜೀವಗಳ ನಡುವಣ, ಮೋಡ ಮಳೆ ಇಳೆಯ ಬೆಳೆಗಳ ನಡುವಿನ ಹೊನ್ನ ಕಿರಣದಂತೆ, ಹಸಿರು–ಉಸಿರುಗಳ ಬಿಡಿಸದ ಬಂದದಂತೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸದಾಕಾಲ ಪ್ರವಹಿಸು ತ್ತಿರಬೇಕು. ಒಬ್ಬ ತಾಯಿ ತನ್ನ ಮಗುವಿನೊಂದಿಗೆ, ಒಂದು ಆಕಳು ತನ್ನ ಕರುವಿನೊಂದಿಗೆ ಒಬ್ಬ ಅಣ್ಣ ತನ್ನ ತಮ್ಮಂದಿ ರೊಂದಿಗೆ ಅವನ ಅಕ್ಕ ತಂಗಿಯರೊಂದಿಗೆ ಮನುಷ್ಯ–ಮನುಷ್ಯರೊಂದಿಗೆ, ಮಾನವ–ಪ್ರಕೃತಿ ಯೊಂದಿಗೆ, ಪ್ರಕೃತಿ–ಪುರುಷನೊಂದಿಗೆ ಹೀಗೆ ಸಕಲ ಚರಾಚರ ಪಂಚ ಭೂತಗಳಾದಿಯಾಗಿ ಸಂವಹಿಸುವ ಅದೃಷ್ಯ ಅಮರಗೀತೆ ಯಂತೆ ಈ ಪ್ರೀತಿ ಪ್ರವಹಿಸುತ್ತಿರಬೇಕು. ಅಂತ್ಯವಿಲ್ಲದ, ಅನಂತದ ಎಲ್ಲೆಯನ್ನೂ ದಾಟಿದ ಗುರಿ ಎಂದರೆ ಅದು ಪ್ರೀತಿಯೇ ಆಗಿರಬೇಕು.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

ನೆನಪಿರಲಿ ಹುಲು ಮಾನವರಾದ ನಾವು ಪ್ರೀತಿಯನ್ನು ಸರಿಯಾದ ದಿಶೆಯಲ್ಲಿ ಅರ್ಥಮಾಡಿಕೊಳ್ಳಬೇಕಿದೆ. ಏಕೆಂದರೆ ಮೂಲತಹಃ ನಾನು, ನನ್ನದು ಮತ್ತು ನನಗಾಗಿ ಎನ್ನುವುದನ್ನು ಮೇಲ್ನೋಟಕ್ಕೆ ಪ್ರೀತಿಯಂತೆ ಎಣಿಸಿದರೂ ಅದು ನಿಜಾರ್ಥದಲ್ಲಿ ಪ್ರೀತಿಯ ಪೂರ್ಣತೆಯಲ್ಲ, ಏಕೆಂದರೆ ಪ್ರೀತಿ ಎನ್ನುವುದು ನೀಡಿ ಪಡೆಯುವಂತಹದ್ದು, ನೀಡಿದಷ್ಟು ಇಮ್ಮಡಿಗೊಳ್ಳುವಂತಹದ್ದು, ಒಮ್ಮೆ ಪ್ರೀತಿಯ ಒರತೆ ಹುಟ್ಟಿತೆಂದರೆ ಅದೆಂದೂ ಬತ್ತದ ಸೆಲೆಯಂತೆ ಸದಾ ಹಸಿರಾಗಿರುವುದು, ಎಲ್ಲಿ ಪ್ರೀತಿ ಇರುತ್ತದೆಯೋ ಅಲ್ಲಿ ಎಲ್ಲವೂ ಚಂದ, ಎಲ್ಲಿ ಪ್ರೀತಿ ಇರುತ್ತದೆಯೋ ಅಲ್ಲಿ ಇದ್ದದ್ದೆಲ್ಲದೂ ಸುಂದರ ಈ ಪ್ರೀತಿಯ ಪರಾಕಾಷ್ಠೆಯ ಮುಂದೆ ಉಳಿದೆಲ್ಲವೂ ಗೌಣವೆ. ಇಂತಹ ಪ್ರೀತಿ ಇಂದು ನಮನಿಮೆಗೆಲ್ಲ ಬೇಕಾಗಿರುವುದು. ಪ್ರೀತಿ ಒಂದಿದ್ದರೆ ಬೇರೆಲ್ಲವನ್ನು ಮಾಫಿ ಮಾಡಬಹುದು ಅದು ಎಂತಹದ್ದೇ ಕಷ್ಟವಿದ್ದರೂ ಪ್ರೀತಿಯ ಬೆಸುಗೆಯಲ್ಲಿ ಕಷ್ಟ ವನ್ನೂ ಇಷ್ಟವಾಗಿಸಿಕೊಳ್ಳಬಹುದು ನಮ್ಮನ್ನು ಮತ್ತಷ್ಟು ಮೊಗದಷ್ಟು ವಿಶಾಲವಾಗುತ್ತಾ ನಮ್ಮ ಸುತ್ತ ಮುತ್ತ ಪ್ರೀತಿಯನ್ನೇ ಹಂಚಬಹುದು, ಜಗತ್ತನ್ನು ಪ್ರೇಮಮಯ ಮಾಡಬಹುದು. ಈ ಪ್ರೀತಿಯ ಪರಿಭಾಷೆಯೆ ಹಾಗೆ ಇದು ನಮ್ಮಗಳ ಹೃದಯವನ್ನು ಆದ್ರಗೊಳಿಸುತ್ತದೆ ನಮ್ಮಗಳ ಮಧ್ಯದಲ್ಲಿ ಹೊಸತನದ ಹೂವುನಗೆಯನ್ನು ಮೂಡಿಸುತ್ತದೆ. ಪ್ರತಿ ಯೊಬ್ಬರ ಹೃದಯಗಳಲ್ಲೂ ಇಂತಹ ಪ್ರೀತಿಯ ಚಿಗುರೊಡೆಯಬೇಕು. ಅದು ನಮ್ಮಗಳ ಮಧ್ಯ ಮರವಾಗಿ ಹೆಮ್ಮರವಾಗಿ ಬೆಳೆಯಬೇಕು. ಅದರ ಪರಿಮಳ ದಿಗಂತಕ್ಕೇರಿ ಅದರಾಚೆಗೂ ನಿಂತು ವಿಶ್ವವ್ಯಾಪಿಯಾಗಬೇಕು, ವಿಶ್ವಪ್ರೇಮತ್ವ ಬೆಳೆಯಬೇಕು ಆಗ ಮಾತ್ರ ನಾವೆಲ್ಲರೂ ನಿಜವಾದ ಪ್ರೀತಿಯಲ್ಲಿ ಮಿಂದ ಅಮರ ಪ್ರೇಮಿಗಳಾಗುತ್ತೇವೆ ನಿಜವಾದ ಅರ್ಥದಲ್ಲಿ ವಿಶ್ವ ಮಾನವರಾಗುತ್ತೇವೆ. ಇಲ್ಲದೇ ಹೋದರೆ ಬಾವ ಶೂನ್ಯವನ್ನು ಹೊಂದಿ ಶಾಶ್ವತ ರಸಹೀನತ್ವವನ್ನು ಹೊಂದಬೇಕಾಗುತ್ತದೆ.

**ಪ್ರೀತಿಸಲೇಕೆ ಭಯ..? ಅದು ಜಗದ ಪಾಯ.**
**ಉಂಟೇ ಆಲಯ ಇಲ್ಲದೆ ಪಾಯ?**
**ಇದನರಿತರೆ ಜಯ ಮರೆತರೆ ಅಪಾಯ.**
**ನುರಿತವರಿಗಿಲ್ಲ ಆ–ಲಯದ ಭಯ.**

ನೆನಪಿರಲಿ ಮನುಶ್ಯರಾದಿಯಾಗಿ ಸಕಲ ಪ್ರಾಣಿ–ಪಕ್ಷಿಗಳೂ ಸಹ ಒಂದಿಲ್ಲೊಂದು ವೈಯಕ್ತಿಕವಾದ ಮತ್ತು ಬಲವಾದ ಕಾರಣಗಳಿಂದ ಹಾಗು ಉತ್ಕಟವಾದ ಬಯಕೆ ಯಿಂದ,



ನಮಗದು ಬೇಕಾಗಿರುವುದರಿಂದ ಈ ಪ್ರೀತಿಯ ಪುಟವನ್ನು ತರೆಯುತ್ತೇವೆ. ಏಕೆಂದರೆ ಈ ಜಗತ್ತಿನಲ್ಲಿ ಯಾರೂ ಏಕಾಂಗಿಯಲ್ಲ ಹಾಗೆ ನಾವು ಈ ಜಗತ್ತಿನಲ್ಲಿ ಒಬ್ಬಂಟಿಯಲ್ಲ ಎಂಬ ಭರವಸೆ ಯನ್ನು ನಮಗೆ ನಾವು ಕಂಡುಕೊಳ್ಳಲು ಮತ್ತದನ್ನು ನಮಗೆ ನಾವೇ ಖಾತ್ರಿ ಪಡಿಸಿಕೊಳ್ಳಲು ಸಹಕರಿಸುವುದೇ ಈ ಪ್ರೀತಿ . ಈ ಪ್ರೀತಿ ನಮ್ಮನ್ನು ಒಂದು ಕಾರ್ಯಕ್ಕೆ ಪ್ರೇರೇಪಿಸಿ, ಪ್ರೋತ್ಸಾಹಿಸಿ ಒಪ್ಪಿಸುತ್ತದೆ, ಇತರರನ್ನು ಒಪ್ಪಿಕೊಳ್ಳುವಂತೆ ಮಾಡುತ್ತದೆ, ನಮ್ಮಲ್ಲಿನ ಸಣ್ಣ ಸಣ್ಣ ಪುಟ್ಟ ತಪ್ಪುಗಳನ್ನು ಕ್ಷಮಿಸುತ್ತದೆ ಮತ್ತು ನಮ್ಮಲ್ಲಿ ಒಂದು ತಾಳುವಿಕೆಯನ್ನು ಬೆಳೆಸುತ್ತದೆ. ನಮ್ಮ ಅವಶ್ಯಕತೆಗಳನ್ನು ನಮ್ಮ ಆದ್ಯತೆಗಳನ್ನು, ನಮ್ಮ ಅಭಿರುಚಿಗಳನ್ನು, ನಮ್ಮ ಚಿಂತನೆಗಳನ್ನು, ನಮ್ಮ ಪ್ರತಿಕ್ರಿಯೆಗಳನ್ನು, ನಮ್ಮ ಸಹಜ ವಿಚಾರಗಳನ್ನು ಭಾವನೆಗಳನ್ನು ಸಹ ಇತರರಿಗಾಗಿ ಬದಲಾಯಿಸುತ್ತದೆ. ಇತರರಿಗಾಗಿ ನಮ್ಮ ಹೃದಯ ಮಿಡಿಯುವಂತೆ ಮಾಡುತ್ತದೆ.

**ನಾನಂತೂ ಪ್ರೀತಿಸುವೆ**
**ಹಿಂದಿನಿಂದ, ಈಗ ಮುಂದೆಯೂ**
**ಇಲ್ಲವೆಂದಾದರೆ ಹೇಳಿ ಬಿಡು**
**ಇಲ್ಲವೆಂದಲ್ಲ, ಒಲ್ಲೆನಂದಲ್ಲ**
**ಇಲ್ಲ ಏನೇ–ನಲ್ಲ ಎಂದು.**

ಹೀಗೆ ಒಮ್ಮೆ ನಮ್ಮಲ್ಲಿ ಜಾಗ್ರತವಾದ ಈ ಪ್ರೀತಿಯ ಭಾವನೆ ನಮ್ಮನ್ನು ಯಾವತ್ತೂ ಜೀವಂತವಾಗಿರಿಸುತ್ತದೆ. ನಾವು ನಮ್ಮ ಬಗ್ಗೆ ಧನಾತ್ಮಕವಾಗಿ ನೋಡಿಕೊಳ್ಳಲು ಪ್ರಾರಂಭಿಸುವುದೇ ನಾವು ಈ ಪ್ರೀತಿಯ ಸೆಲೆಯಲ್ಲಿ ಸಿಲುಕಿಕೊಂಡಾಗ. ನಾವು ನಮ್ಮ ಜೀವನವನ್ನು ಆನಂದಿಸಲು ಪ್ರಾರಂಭಿಸುವುದೇ ಈ ಪ್ರೀತಿ ಹುಟ್ಟಿದಮೇಲೆಯೇ. ನಾವು ಸರ್ವಕಾಲಕ್ಕೂ, ಸರ್ವರೀತಿಯಲ್ಲೂ ಒಂದು ಪ್ರೇರಣೆ ಒಂದು ಸ್ಪೂರ್ತಿಯನ್ನು ಈ ಪ್ರೀತಿಯಿಂದಾಗಿಯೇ ಅನುಭವಿಸುತ್ತೇವೆ. ನಾವು ನಮ್ಮ ಜೀವನದಲ್ಲಿ ಉತ್ತಮವಾಗಿ ಏನನ್ನಾದರು ಮಾಡಲು ಯೋಚಿಸುತ್ತೇವೆ ಮತ್ತು ಉತ್ತಮವಾದದ್ದಕ್ಕಾಗಿ ಶ್ರಮಿಸುತ್ತೇವೆ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾರೆ ನಾವು ಬದುಕುವುದ್ದಾಕ್ಕಾಗಿಯೇ ಈ ಪ್ರೀತಿಯಲ್ಲಿ ಬೀಳುತ್ತೇವೆ ಮತ್ತು ಬದುಕಲು ಪ್ರಾರಂಭಿಸುತ್ತೇವೆ. ಹಾಗಾಗಿಯೇ ನಾವು ಜೀವನದಲ್ಲಿ ಏನನ್ನು ಹೊಂದಿದ್ದೇವೆ ಅದನ್ನೆ ಕೃತಜ್ಞತೆಯಿಂದ ಒಪ್ಪಿಕಳ್ಳುತ್ತೇವೆ ಮತ್ತು ಇತರರಿಗೂ ಹಂಚುತ್ತೇವೆ. ಅದನ್ನೆ ಮುಂದುವರಿಯುತ್ತೇವೆ ಇದೇ ಈ ಪ್ರೀತಿಯ ಶಕ್ತಿ ಹಾಗಾಗಿಯೇ ಈ ಪ್ರೀತಿಯನ್ನು ಕೇವಲ ಒಂದು ದಿನಕ್ಕೆ ಒಂದು ಆಚರಣೆಗೆ ಒಂದು ಬಂದಕ್ಕೆ ಸೀಮಿತಗೊಳಿಸದೆ, ಪ್ರೀತಿಯ ಅಖಂಡ ವ್ಯಾಪ್ತಿಯನ್ನು, ಅನಂತ ವ್ಯಾಪಕತೆಯನ್ನು, ಅವಿಚ್ಚನ್ನವಾದ ಅಮರ ಗೀತೆಯನ್ನಾಗಿಸೋಣ. ಸರ್ವರ ಹಿತಕ್ಕಾಗಿ ಸಕಲರಲ್ಲೂ ಪ್ರೀತಿಯು ಪ್ರವಹಿಸುವಂತೆ ನೋಡಿಕೊಳ್ಳೋಣ.

**ಪ್ರೀತಿಸಲೇ ಬೇಕು ನಮ್ಮನರಿತವರ**
**ಕೂಡಿ ಕಲಿತವರ, ಕಲೆತು ಮರೆತವರ**
**ಮರೆತು ಮೆರೆದವರ, ಮೆರೆದೀಗ ಕೊರಗುವವರ**
**ಕೊರಗಿ ಕೊರಗಿ ಕರಗುವ ಮುನ್ನ**
**ಪ್ರೀತಿಸಲೇ ಬೇಕು ನಮ್ಮನರಿತವರ**

# ಮೌಢ್ಯತೆ, ಮಿಥ್ಯೆಗಳಿಂದ ಹೊರಬನ್ನಿ

## ಅಂತರಾಷ್ಟ್ರೀಯ ಅಪಸ್ಮಾರ ದಿನಾಚರಣೆಯಲ್ಲಿ ವೈದ್ಯ ಡಾ.ಹರಿಪ್ರಸಾದ್ ಸಲಹೆ



■ **ಹಂಪಿ ಟೈಮ್ಸ್ ಹೊಸಪೇಟೆ**

ಮೂರ್ಛೆರೋಗದ ಬಗೆಗಿನನ ಮೌಢ್ಯತೆ ಹಾಗೂ ಮಿಥ್ಯಗಳಿಂದ ಸಾಮಾನ್ಯ ಜನರು ಹೊರಬರ ಬೇಕಿದೆ. ರೋಗದಿಂದ ಭಯಭೀತ ರಾಗದಂತೆ ಸರಿಯಾದ ಔಷಧಿಗಳನ್ನು ತೆಗೆದುಕೊಳ್ಳುವಂತೆ ಜನರಿಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಅಂತರಾಷ್ಟ್ರೀಯ ಅಪಸ್ಮಾರ ದಿನಾಚರಣೆಯನ್ನು ಆಚರಿಸ ಲಾಗುತ್ತದೆ ಎಂದು ಆಡಳಿತ ವೈದ್ಯಾಧಿಕಾರಿ ಡಾ.ಹರಿಪ್ರಸಾದ್ ಹೇಳಿದರು.

ನಗರದ ಜಿಲ್ಲಾಡಳಿತ, ಜಿಪಂ, ಕರ್ನಾಟಕ ಮೆದುಳು ಆರೋಗ್ಯ ಉಪಕ್ರಮ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಾನಸಿಕ ಆರೋಗ್ಯ ವಿಭಾಗ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ತಾಲೂಕು ಆರೋಗ್ಯ ವೈದ್ಯಾಧಿಕಾರಿಗಳ ಕಚೇರಿ ಕೂಡ್ಲಿಗಿ, ರಾಘವೇಂದ್ರ ಪ್ಯಾರಾಮೆಡಿಕಲ್ ಕಾಲೇಜು ಸಹಭಾಗಿತ್ವದಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಏರ್ಪಡಿಸಿದ್ದ ಅಂತರಾಷ್ಟ್ರೀಯ ಅಪಸ್ಮಾರ ದಿನಾಚರಣೆ ಕಾರ್ಯಕ್ರಮಕ್ಕೆ ಉದ್ಘಾಟಿಸಿ ಶನಿವಾರ ಅವರು ಮಾತನಾಡಿದರು. ರೋಗಗ್ರಸ್ತತೆಯನ್ನು ಮೀರಿ, ಅಪಸ್ಮಾರದ ಅರಿವಿನೊಂದಿಗೆ ಜೀವನವನ್ನು ಸಶಕ್ತಗೊಳಿಸುವ ಎಂಬ ಘೋಷವಾಕ್ಯದೊಂದಿಗೆ ಅಂತರಾಷ್ಟ್ರೀಯ ಅಪಸ್ಮಾರ ದಿನಾಚರಣೆಯನ್ನು ಆಚರಿಸಲಾಗುತ್ತಿದೆ. ಮೂರ್ಛೆರೋಗದ ಬಗ್ಗೆ ಸಾಮಾನ್ಯ ಜನರು ಸತ್ಯಾಸತ್ಯತೆಗಳನ್ನು ಅರಿಯಬೇಕಿದೆ. ಇದೊಂದು ಚಿಕಿತ್ಸೆ ನೀಡಬಹುದಾದ ಕಾಯಿಲೆಯಾಗಿದ್ದು, ಸರಿಯಾದ ಔಷಧಿಯನ್ನು ತೆಗೆದುಕೊಳ್ಳುವು ದರಿಂದ ಮೂರ್ಛೆ ರೋಗವನ್ನು ಗುಣಪಡಿ ಸುವುದು ಸಾಧ್ಯ. ಮೂರ್ಛೆರೋಗಕ್ಕೆ ಒಳಗಾದ ವ್ಯಕ್ತಿಯ ವಿಡಿಯೋ ಮಾಡಬೇಕು, ಇದರಿಂದ ವೈದ್ಯರಿಗೆ ಚಿಕಿತ್ಸೆ ನೀಡಲು ಸಹಾಯವಾಗುತ್ತದೆ. ಮೂರ್ಛೆ ಬಂದಾಗ ರೋಗಿಯ ಕೈಯಲ್ಲಿ ಬೀಗದ ಕೈ ಇರಿಸುವುದು, ಈರುಳ್ಳಿ ಇಲ್ಲವೇ ಕೊಳಕು ಪಾದರಕ್ಷೆಯನ್ನು ಮೂಸುವಂತೆ ಮಾಡಬಾರದು ಎಂದರು. ಮೂರ್ಛೆ ಬಂದಾಗ ರೋಗಿಗೆ ಪ್ರಥಮ ಚಿಕಿತ್ಸೆ ನೀಡಬೇಕು ಹಾಗೂ ಸಮೀಪದ ಆಸ್ಪತ್ರೆಗೆ ಸೇರಿಸಬೇಕು. ವೈದರು ನೀಡುವ ಸಲಹೆಗಳನ್ನು ಪಾಲಿಸಬೇಕು. ಅಪಸ್ಮಾರದ ವೇಳೆ ಬಾಯಿಯಲ್ಲಿರುವ ಯಾವುದೇ ದ್ರವವು ಹೊರಬರುವಂತೆ ನೋಡಿಕೊಳ್ಳಬೇಕು. ವ್ಯಕ್ತಿಯ ತಲೆಯ ಕೆಳಗೆ ಕೆಲವು ರೀತಿಯ ಮೃದುವಾದ ಬಟ್ಟೆಯನ್ನು ಇರಿಸಬೇಕು. ವ್ಯಕ್ತಿಯ ಬಾಯಿಗೆ ಏನನ್ನೂ ಹಾಕಬಾರದು. ವೈದ್ಯರ ಬಳಿ ಹೋಗುವವರೆಗೂ ವ್ಯಕ್ತಿಯೊಂದಿಗೆ ಜತೆಗಿರ ಬೇಕು. ವ್ಯಕ್ತಿಯನ್ನು ವಿಶ್ರಾಂತಿ ಅಥವಾ ಮಲಗಲು ಅವಕಾಶ ಮಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಡಾ.ಭಾರತ್ ಉಪನ್ಯಾಸ ನೀಡಿದರು. ಈ ವೇಳೆ ಡಾ.ಕೆ.ರಾಧಿಕಾ, ಡಾ.ಅಶಾ ಕೋರಿ, ಡಾ.ರಾಘವೇಂದ್ರ ಸೇರಿದಂತೆ ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಭಾಗವಹಿಸಿದ್ದರು.

# ತಾಲೂಕು ಆಡಳಿತವತಿಯಿಂದ ಸೇವಾಲಾಲ್ ಜಯಂತಿ ಆಚರಣೆ



■ **ಹಂಪಿ ಟೈಮ್ಸ್ ಕೂಡ್ಲಿಗಿ**

ಸೇವಾಲಾಲ್ ಒಬ್ಬ ದನಗಾಯಿ ಗೋಪಾಲಕನಾಗಿ ತಮ್ಮ ಜೀವನದ ಅನುಭವ ವನ್ನು ತಮ್ಮ ತತ್ವದ ಮೂಲಕ ಜನರಲ್ಲಿನ ಅಜ್ಞಾನವನ್ನು ದೂರ ಮಾಡಿದರು ಎಂದು ಯಾದಗಿರಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಅರ್ಥಶಾಸ್ತ್ರ ಅತಿಥಿ ಉಪನ್ಯಾಸಕ ಡಾ.ರಾಮನಾಯ್ಕ್ .ಡಿ ಹೇಳಿದರು.

ಪಟ್ಟಣದ ತಾಲೂಕು ಕಚೇರಿಯಲ್ಲಿ ತಾಲೂಕು ಆಡಳಿತ ಹಾಗೂ ತಾಲೂಕು ಬಂಜಾರ ಸೇವಾ ಸಂಘದ ವತಿಯಿಂದ ಏರ್ಪಡಿಸಿದ್ದ ಶ್ರೀ ಸಂತ ಸೇವಲಾಲ್ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿದರು. ಸಂತ ಸೇವಾಲಾಲ್‌ರು ಸತ್ಯ, ಅಹಿಂಸೆ, ದಯೆ, ಕರುಣೆಗಳನ್ನು ಪಾಲಿಸುವ ಮೂಲಕ ಧರ್ಮಾತೀತರಾಗಿ ಎಂದು ಸಾರಿದರು. ಇದಲ್ಲದೆ ಮಾನವ ಜನ್ಮ ಪವಿತ್ರವಾದದ್ದು ಇದನ್ನು ಹಾಳು ಮಾಡಿಕೊಳ್ಳಬೇಡಿ, ವ್ಯಸನಗಳಿಂದ ದೂರವಿರಿ ಅರಿಷಡ್ ವರ್ಗಗಳನ್ನು ಸುಟ್ಟು ಹಾಕಿ ಪ್ರಾಮಾಣಿಕರಾಗಿ ಜೀವಿಸಿ, ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡಿರಿ ಎಂದು ತಿಳಿಸಿದರು. ಅಷ್ಟೇ ಅಲ್ಲದೆ ಶಿಕ್ಷಣದ ಮಹತ್ವವನ್ನು ಸಾರುವ ಮೂಲಕ ಎಲ್ಲರೂ ಶಿಕ್ಷಿತರಾಗಿ ಅಕ್ಷರ ಜ್ಞಾನವನ್ನು ಪಡೆದು ಜಗತ್ತಿಗೆ ದಾರಿ ದೀಪವಾಗಿ ಎಂದು ಹೇಳಿದರು. ಸೇವಾ ಲಾಲರು ತಮ್ಮ ತತ್ವಗಳ ಮೂಲಕ ಲೋಕಕ್ಕೆ ಜ್ಞಾನದ ಮೂಲಕ ಮುಕ್ತಿ ಮಾರ್ಗ ತೋರಿಸಿದರು. ಸರ್ವರನ್ನು ಒಳಗೊಂಡ ಸಮ ಸಮಾಜದ ನಿರ್ಮಾಣ ಹಾಗೂ ಸರ್ವರಲ್ಲೂ ಸೋದರತೆಯ ಭಾವನೆಯನ್ನು ಮೂಡಲು ಪ್ರೇರೇಪಿಸಿದರು ಎಂದು ತಿಳಿಸಿದರು.


ಜಯಂತಿ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಎಂ.ರೇಣುಕಾ, ಗ್ರೇಡ್ 2 ತಹಸೀಲ್ದಾರ್ ಗೈರು ಹಾಜರಿಯಾಗಿದ್ದನ್ನು ಸಮಾಜದ ಮುಖಂಡರು ಪ್ರಶ್ನಿಸಿದರು. ತಹಸೀಲ್ದಾರ್ ಗ್ರಾಪಂ ಅಧ್ಯಕ್ಷ, ಉಪಾಧ್ಯಕ್ಷ ಚುನಾವಣೆ ನಿಮಿತ್ತ ಹೋಗಿದ್ದು, ಗ್ರೇಡ್ 2 ತಹಸೀಲ್ದಾರ್ ಮೊರಾರ್ಜಿ ಪರೀಕ್ಷೆ ಪ್ರಶ್ನೆ ಪತ್ರಿಕೆ ತರಲು ಹೋಗಿದ್ದಾರೆ ಎಂದು ಅಧಿಕಾರಿಗಳು ತಿಳಿಸಿ ಗೊಂದಲಕ್ಕೆ ತೆರೆ ಎಳೆದರು.

ತಾಪಂ ಇಒ ಕೆ. ನರಸಪ್ಪ, ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಎಸ್.ವೆಂಕಟೇಶ, ಆಲ್ ಇಂಡಿಯಾ ಬಂಜಾರ ಸೇವಾ ಸಂಘದ ಜಿಲ್ಲಾಧ್ಯಕ್ಷ ಕೆ.ಶಿವಕುಮಾರ್, ತಾಲೂಕು ಅಧ್ಯಕ್ಷ ವಾಸುದೇವ ನಾಯ್ಕ್, ಉಪಾಧ್ಯಕ್ಷ ಧರ್ಮಾನಾಯ್ಕ್, ಪ್ರಧಾನ ಕಾರ್ಯದರ್ಶಿ ಪ್ರಕಾಶ ನಾಯ್ಕ್, ಎಲ್.ಪವಿತ್ರ, ಪಪಂ ಸದಸ್ಯರಾದ ಬಾಸೂ ನಾಯ್ಕ್, ಪೂರ್ಯಾ ನಾಯ್ಕ್, ನಿಕಟಪೂರ್ವ ಅಧ್ಯಕ್ಷ ಶಾಮಾನಾಯ್ಕ್, ಮಂಜು ನಾಯ್ಕ್, ಶೇಖರ್ ನಾಯ್ಕ್, ಜಾಪನಾಯ್ಕ್, ತಾವ್ಯಾರೆ ನಾಯ್ಕ್ ಸೇರಿದಂತೆ ಅನೇಕರು ಇದ್ದರು.

# ಶುಲ್ಕ ಮರುಪಾವತಿಗೆ ಅವಧಿ ವಿಸ್ತರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಪದವಿ, ಸ್ನಾತಕೋತ್ತರ ಪದವಿ, ವೃತ್ತಿಪರ, ನರ್ಸಿಂಗ್ ಕೋರ್ಸ್ ಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ನೀಡಲಾಗುತ್ತಿರುವ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಮಾರ್ಚ್ 3 ರವರೆಗೆ ವಿಸ್ತರಿಸಲಾಗಿದೆ. ವೆಬ್‌ಸೈಟ್ https://ssp.postmatric.karnataka.gov.in ನಲ್ಲಿ ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಬೇಕು. ಮಾಹಿತಿಗೆ https://bcwd.karnataka.gov.in ಮತ್ತು ಇಲಾಖಾ ಸಹಾಯವಾಣಿ ಸಂಖ್ಯೆ 8050770005, ಮಿಂಚಂಚೆ bcwdhelpline@gmail.com ಸಂಪರ್ಕಿಸಲು ಇಲಾಖೆಯ ಜಿಲ್ಲಾ ಅಧಿಕಾರಿಗಳು ತಿಳಿಸಿದ್ದಾರೆ.




## ಮೈಲಾರದಲ್ಲಿ ಅನಾಮಧೇಯ ವ್ಯಕ್ತಿ ಸಾವು

■ **ಹಂಪಿ ಟೈಮ್ಸ್ ಹೊಸಪೇಟೆ**

ಹಡಗಲಿ ತಾಲೂಕಿನ ಮೈಲಾರ ಗ್ರಾಮದ ತುಂಗಭದ್ರ ನದಿ ತೀರದಲ್ಲಿ ಅಸ್ವಸ್ಥರಾಗಿ ಬಿದ್ದು ವ್ಯಕ್ತಿ ಮೃತಪಟ್ಟಿರುವ ಬಗ್ಗೆ ಹಿರೇಹಡಗಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಮೃತ ವ್ಯಕ್ತಿಯ ಎದೆಯ ಬಳಿ ಹಳೆ ಗಾಯದ ಗುರುತು ಇರುತ್ತದೆ. ಮೃತನ ವಾರಸುದಾರರು ಪತ್ತೆಯಾಗಿರುವುದಿಲ್ಲ. ಮೃತದೇಹವನ್ನು ದಾವಣಗೆರೆ ಜಿಲ್ಲಾ ಆಸ್ಪತ್ರೆಯ ಶೈತ್ಯಗಾರದ ಶೀಥಲೀಕರಣದಲ್ಲಿ ಇರಿಸಲಾಗಿದೆ.

ಕಂದು ನೀಲಿ ಬರ್ಮೊಡ ಚಡ್ಡಿ, ನೀಲಿ ಚೌಕುಳಿಗಳಿರುವ ಲುಂಗಿ ಧರಿಸಿರುತ್ತಾನೆ. ಈ ವ್ಯಕ್ತಿ ಮಾಹಿತಿ ಇದ್ದಲ್ಲಿ, ಹಿರೇಹಡಗಲಿ ಪೊಲೀಸ್ ಠಾಣೆ, ಕಂಟ್ರೋಲ್ ರೂಮ್ : 08394-200202, 9480805700, ಪೊಲೀಸ್ ಸಬ್ ಇನ್ಸ್ ಪೆಕ್ಟರ್ 9480805781 ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಹಿರೇಹಡಗಲಿ ಪೊಲೀಸ್ ಠಾಣಾಧಿಕಾರಿ ತಿಳಿಸಿದ್ದಾರೆ.

## ಜಾತಿ-ಆದಾಯ ಪ್ರಮಾಣ ಪತ್ರ ವಿತರಣೆ ಸಹಾಯವಾಣಿ ಕೇಂದ್ರ ಆರಂಭ

■ **ಹಂಪಿ ಟೈಮ್ಸ್ ಹೊಸಪೇಟೆ**

ಗ್ರಾಮ ಆಡಳಿತ ಅಧಿಕಾರಿಗಳ ಮುಷ್ಕರದಿಂದ ರಾಜ್ಯದಲ್ಲಿ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ನೀಡುವಲ್ಲಿ ವಿಳಂಬವಾಗುತ್ತಿದೆ. ಇದರಿಂದಾಗಿ ಶಾಲಾ ಕಾಲೇಜುಗಳಿಗೆ ಪ್ರವೇಶಾತಿ ಪಡೆಯಲು, ಪರೀಕ್ಷೆ ಹಾಗೂ ನೇಮಕಾತಿ ಅರ್ಜಿಸಲ್ಲಿಸಲು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ವಿದ್ಯಾರ್ಥಿಗಳ ಈ ಸಮಸ್ಯೆಗೆ ತ್ವರಿತವಾಗಿ ಸ್ಪಂದಿಸಲು ಜಿಲ್ಲಾಧಿಕಾರಿಗಳ ಕಾರ್ಯಾಲಯ ಸೇರಿದಂತೆ ತಹಶೀಲ್ದಾರ್ ಕಚೇರಿಯಲ್ಲಿ ಸಹಾಯವಾಣಿ ಕೇಂದ್ರ ತೆರೆಯಲಾಗಿದೆ.

ವಿದ್ಯಾರ್ಥಿಗಳು ಜಾತಿ ಪ್ರಮಾಣ ಪತ್ರ ಪಡೆಯಲು ತೊಂದರೆಯಾದಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯ 08394-295655, ಜಿಲ್ಲಾ ಎಜೆಎಸ್‌ಕೆ ಸಮಾಲೋಚಕರು 9632952177, ಹೊಸಪೇಟೆ ತಾಲೂಕು ಕಛೇರಿ 08394-224208, ಕೂಡ್ಲಿಗಿ ತಾಲೂಕು ಕಛೇರಿ 08391-220225, ಹಗರಿ ಬೊಮ್ಮನಹಳ್ಳಿ ತಾಲೂಕು ಕಛೇರಿ 08397-238255, ಕೊಟ್ಟೂರು ತಾಲೂಕು ಕಛೇರಿ 08391-225400, ಹಡಗಲಿ ತಾಲೂಕು ಕಛೇರಿ, ಹಡಗಲಿ 08399-240238, ಹರಪನಹಳ್ಳಿ ತಾಲೂಕು ಕಛೇರಿ 08398-286262 ಸಹಾಯವಾಣಿಗೆ ಕರೆ ಮಾಡಬಹುದು ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ತಿಳಿಸಿದ್ದಾರೆ.

# ಬಂಜಾರರ ಶ್ರೀ ಸಂತ ಸೇವಾಲಾಲ್ ದೈವಪುರುಷ

### ಬಳ್ಳಾರಿಯಲ್ಲಿ ಸಂಭ್ರಮದ ಸಂತ ಸೇವಾಲಾಲ್ ಜಯಂತಿ ಆಚರಣೆ | ಮಾನವ ಕುಲ ಧರ್ಮಾತೀತ | ನಾಗೇಂದ್ರ ನಾಯ್ಕ್ ಉಪನ್ಯಾಸ







■ **ಹಂಪಿ ಟೈಮ್ಸ್ ಬಳ್ಳಾರಿ**

ಮಾನವ ಕುಲವು ಅಹಿಂಸೆ, ದಯೆ, ಕರುಣೆಗಳನ್ನು ಪಾಲಿಸುವ ಮೂಲಕ ಧರ್ಮಾತೀತರಾಗಿ ಎಂದು ಸಾರಿದ ಮಹಾನ್ ಸಂತ ಸೇವಾಲಾಲರು ಎಂದು ಶಿವಮೊಗ್ಗ ಜಿಲ್ಲೆಯ ಮಲವಗೊಪ್ಪದ ಸಹ ಪ್ರಾಧ್ಯಾಪಕರಾದ ನಾಗೇಂದ್ರ ನಾಯ್ಕ್.ಕೆ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಹಾನಗರ ಪಾಲಿಕೆ ಇವರ ಸಂಯುಕ್ತಾಶ್ರಯದಲ್ಲಿ ನಗರದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿದ್ದ ಸಂತ ಸೇವಾಲಾಲ್ ಜಯಂತಿ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿ ಅವರು ಮಾತನಾಡಿದರು.

ಸೇವಾಲಾಲರು ತಮ್ಮ ತತ್ವಗಳ ಮೂಲಕ ಲೋಕಕ್ಕೆ ಜ್ಞಾನದ ಮೂಲಕ ಮುಕ್ತಿ ಮಾರ್ಗ ತೋರಿಸಿದವರು. 1739ರಲ್ಲಿ ದಾವಣಗೆರೆ ಜಿಲ್ಲೆಯ ನ್ಯಾಮತಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಭೀಮಾನಾಯ್ಕ ಮತ್ತು ಧರ್ಮಿಣಿ ಮಾತೆ ದಂಪತಿಯ ಮಗನಾಗಿ ಜನ್ಮತಾಳಿದ ಸಂತ ಸೇವಾಲಾಲ್ ಸೂರಗೊಂಡನಕೊಪ್ಪದಲ್ಲಿ ಅನೇಕ ಪವಾಡಗಳನ್ನು ನಡೆಸಿದ್ದಾರೆ ಎಂದು ತಿಳಿಸಿದರು.

ಬಂಜಾರರು ಈ ದೈವ ಪುರುಷನನ್ನು 'ಮೋತಿವಾಳೋ', 'ಲಾಲ್ ಮೋತಿ' ಎಂದು ಕರೆಯುತ್ತಾರೆ. ಕಾರಣ ಮುಂಬಯಿಯ 'ಸ್ಮಿತ್ ಭಾವುಚಾ' ಎಂಬ ಸ್ಥಳದಲ್ಲಿ ಹಿಂದೆ ಪೋರ್ಚುಗೀಸರ ಹಡಗು ಸಿಕ್ಕಿ ಹಾಕಿ ಕೊಂಡಿತ್ತು. ಇದನ್ನು ಸೇವಾಲಾಲ್ ತಮ್ಮ ಜಾಣತನದಿಂದ ದಡ ಸೇರಿಸಿ ವೀರರಾಗಿದ್ದರು ಎಂದು ವಿವರಿಸಿದರು.

ದೇವಿ ಮರಿಯಮ್ಮ ಅವರಿಂದ ದೊರೆತ ದಿವ್ಯಶಕ್ತಿಯನ್ನು ಬಂಜಾರರು ಸೇರಿ ಅಲೆಮಾರಿ ಜೀವನ ನಡೆಸುವ ಸಮುದಾಯಗಳನ್ನು ಉದ್ಧರಿಸಲು ಬಳಸಿದ ಸಂತ ಇವರು ಎಂಬ ಕಥೆಗಳು ಇಂದಿಗೂ ಚಾಲ್ತಿಯಲ್ಲಿವೆ. ಸೇವಾಲಾಲರು ಅನೇಕ ಪವಾಡಗಳನ್ನು ಮಾಡಿದ್ದಾರೆ. ಬಂಡಿಯನ್ನು ನಗಾರಿಯನ್ನಾಗಿ ಬಾರಿಸುವುದು, ಮಣ್ಣನ್ನು ಹುಗ್ಗಿ ಪಾಯಸವನ್ನಾಗಿಸುವುದು, ನೀರನ್ನು ತುಪ್ಪ ಮಾಡಿ ಯಜ್ಞ ಮಾಡುತ್ತಿದ್ದರು ಎನ್ನುವ ಪ್ರತೀತಿ ಇದೆ. ಮಹಾರಾಷ್ಟ್ರದ ಪೌರಾಗಢದಲ್ಲಿ (ಪೌರಾದೇವಿಯ ಸ್ಥಳ) ಸೇವಾಲಾಲರು ಐಕ್ಯರಾದರು ಎಂದು ಇತಿಹಾಸ ಹೇಳುತ್ತದೆ ಎಂದರು.

ಇದಕ್ಕೂ ಮುನ್ನ ಸಂತ ಸೇವಾಲಾಲ್ ಅವರ ಭಾವಚಿತ್ರಕ್ಕೆ ಗಣ್ಯರು ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ವೀರೇಶ್ ದಳವಾಯಿ ತಂಡದವರು ಸಂತ ಸೇವಲಾಲ್‌ರ ಕುರಿತ ಭಕ್ತಿ ಗಾಯನ ಪ್ರಸ್ತುತ ಪಡಿಸಿದರು. ಕಾರ್ಯಕ್ರಮದಲ್ಲಿ ಬಂಜಾರ ಸಮುದಾಯದ ಮಕ್ಕಳು ನೃತ್ಯ ಪ್ರದರ್ಶಿಸಿದರು.

**ಸಂಭ್ರಮದ ಮೆರವಣಿಗೆ:**

ಸಂತ ಸೇವಾಲಾಲ್ ಜಯಂತಿಯ ಅಂಗವಾಗಿ ಏರ್ಪಡಿಸಿದ್ದ ಮೆರವಣಿಗೆಯು ಸಂಭ್ರಮದಿಂದ ನಡೆಯಿತು. ಮೆರವಣಿಗೆಗೆ ನಗರದ ಡಾ. ರಾಜ್‌ಕುಮಾರ್ ರಸ್ತೆಯ ಮುನ್ಸಿಪಾಲ್ ಕಾಲೇಜು ಮೈದಾನದ ಆವರಣದಲ್ಲಿ ಮಹಾನಗರ ಪಾಲಿಕೆಯ ಮಾಜಿ ಮೇಯರ್ ಬಿ.ಶ್ವೇತ ಅವರು ಸಂತ ಸೇವಾಲಾಲ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಚಾಲನೆ ನೀಡಿದರು.

ಡೊಳ್ಳು ಕುಣಿತ, ತಾಷೆ ರಾಂಡೋಲ್ ಸೇರಿದಂತೆ ಲಂಬಾಣಿ ಕಸೂತಿಯ ವೇಷ ಧರಿಸಿದ ಮಹಿಳೆಯರು ಭಾಗವಹಿಸಿ ಮೆರವಣಿಗೆಗೆ ಮೆರಗು ತಂದರು.

ಮೆರವಣಿಗೆಯು ಮುನಿಸಿಪಲ್ ಮೈದಾನದಿಂದ ಆರಂಭವಾಗಿ ಗಡಿಗಿ ಚೆನ್ನಪ್ಪ ವೃತ್ತ, ಬೆಂಗಳೂರು ರಸ್ತೆ, ತೇರು ಬೀದಿ, ಹೆಚ್.ಆರ್.ಗವಿಯಪ್ಪ ವೃತ್ತದ ಮಾರ್ಗವಾಗಿ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ತಲುಪಿ ಸಂಪನ್ನಗೊಂಡಿತು.

ಈ ಸಂದರ್ಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಬಿ.ನಾಗರಾಜ, ಜಿಲ್ಲಾ ಸೇವಾಲಾಲ್ ಬಂಜಾರ ಸಂಘದ ಅಧ್ಯಕ್ಷ ರಾಮುನಾಯ್ಕ್ ಸೇರಿದಂತೆ ಸಮಾಜದ ಮುಖಂಡರು, ಜನ ಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ನಲಿಕಲಿ ಮೂಲಕ ಮಕ್ಕಳಿಗೆ ಅಭ್ಯಾಸ ಮಾಡಿಸಿ: ನಲಿನ್ ಅತುಲ್

■ **ಹಂಪಿ ಟೈಮ್ಸ್ ಕೊಪ್ಪಳ**

ಮಕ್ಕಳ ಶೈಕ್ಷಣಿಕ ಬೆಳವಣಿಗೆಗೆ ಪೂರ್ವ ಪ್ರಾಥಮಿಕ ಹಂತವು ಪ್ರಮುಖವಾಗಿದ್ದು, ನಲಿಕಲಿ ಬೋಧನಾ ಪದ್ಧತಿ ಮೂಲಕ ಮಕ್ಕಳಿಗೆ ಅಭ್ಯಾಸ ಮಾಡಿಸಬೇಕು ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್ ಹೇಳಿದರು.

ಅವರು ಗುರುವಾರ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಬಿ.ಆರ್.ಪಿ ಮತ್ತು ಸಿ.ಆರ್.ಪಿ ಯವರೊಂದಿಗೆ ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಎಲ್ಲಾ ಸಿ.ಆರ್.ಪಿ.ಗಳು ಶಾಲೆಗೆ ಸಂದರ್ಶನ ಮಾಡಿದಾಗ, ಮೊದಲು ಅಲ್ಲಿನ ಕಲಿಕಾ ವ್ಯವಸ್ಥೆಯನ್ನು ಪರಿಶೀಲಿಸಬೇಕು. ಶಿಕ್ಷಕರು ಮಕ್ಕಳಿಗೆ ಯಾವ ರೀತಿಯಲ್ಲಿ ಪಾಠ ಮಾಡುತ್ತಿದ್ದಾರೆ ಎಂಬುವುದನ್ನು ಗಮನಿಸಿ, ಪಾಠ ಮಾಡುವ ಮಾದರಿಗಳ ಬಗ್ಗೆ ಅಗತ್ಯ ಮಾರ್ಗದರ್ಶನ ಮಾಡಬೇಕು. ಇದರ ಜೊತೆಗೆ ಮಕ್ಕಳ ಫಲಿತಾಂಶ ವೀಕ್ಷಣೆ ಮಾಡಿ, ಮಕ್ಕಳ ಕಲಿಕೆಗೆ ವಿಶೇಷ ಒತ್ತು ನೀಡಬೇಕು. ಸಿ. ಆರ್.ಪಿ.ಗಳು 20ಕ್ಕಿಂತ ಹೆಚ್ಚು ಶಾಲಾ ಸಂದರ್ಶನ ಮಾಡಬೇಕು. ಈ ಬಗ್ಗೆ ಸೂಕ್ತ ಮಾಹಿತಿಯೊಂದಿಗೆ ವರದಿ ನೀಡಬೇಕು. ಇದರ ಜೊತೆಗೆ ಬಿ.ಆರ್.ಸಿ.ಗಳು ಪ್ರತಿ ತಿಂಗಳು ಸರ್ಕಾರಿ ಶಾಲೆಗಳ ಸಂದರ್ಶನ ಮಾಡಬೇಕು. ನಿಗದಿತ ಗುರಿಯನ್ನು ಪೂರ್ಣಗೊಳಿಸದ ಮತ್ತು ವರದಿ ನೀಡದ ಸಿ.ಆರ್.ಪಿ ಮತ್ತು ಬಿ.ಆರ್.ಸಿ.ಗಳ ವಿರುದ್ಧ ಕಠಿಣವಾದ ಕ್ರಮ ಕೈಗೊಳ್ಳಲಾಗುವುದು ಎಂದು ಸೂಚನೆ ನೀಡಿದರು.

ಎಸ್.ಎ.ಟಿ.ಎಸ್ ಪ್ರಕಾರ ಎಫ್.ಎ-1 ರಿಂದ ಎಫ್.ಎ-4 ವರೆಗೆ ಫಲಿತಾಂಶದ ವಿವರವನ್ನು ಎಸ್.ಎ.ಟಿ.ಎಸ್.ನಲ್ಲಿ ಅಪ್ಲೋಡ್ ಮಾಡಬೇಕು. ಜಿಲ್ಲೆಯಲ್ಲಿರುವ ಒಟ್ಟು ಶಾಲೆಗಳಲ್ಲಿ ಶೇ.20 ರಷ್ಟು ಶಾಲೆಯವರು ಮಾತ್ರ ಎಸ್.ಎ.ಟಿ.ಎಸ್.ನಲ್ಲಿ ಕಾರ್ಯ ಚಟುವಟಿಕೆ ಅಪ್ಲೋಡ್ ಮಾಡಿದ್ದು, ಈ ಬಗ್ಗೆ ಹೆಚ್ಚು ಗಮನ ಹರಿಸಿ, ಸಂಬಂಧಪಟ್ಟ ನೋಡಲ್ ಅಧಿಕಾರಿಗಳು, ಎಲ್ಲಾ ಸಿ.ಆರ್.ಪಿ., ಬಿ.ಆರ್.ಪಿ., ಬಿ.ಆರ್.ಸಿ., ಬಿ.ಇ.ಓ. ಮತ್ತು ಡಯಟ್ ಅಧಿಕಾರಿಗಳು ಸೇರಿ, ಪರಸ್ಪರ ಸಮನ್ವಯತೆಯಿಂದ ಕಾರ್ಯ ನಿರ್ವಹಿಸುವುದರ ಜೊತೆಗೆ ಜಿಲ್ಲೆಯ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಶ್ರಮಿಸಬೇಕು ಎಂದು ಹೇಳಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಮಕ್ಕಳು 10ನೇ ತರಗತಿಗೆ ಬಂದಾಗ ಪರೀಕ್ಷಾ ಫಲಿತಾಂಶ ನೋಡುತ್ತೇವೆ. ಆದರೆ, 2025-26ನೇ ಸಾಲಿನ ಆರಂಭದಿಂದ 1ನೇ ತರಗತಿಯಿಂದಲೇ ಎಫ್.ಎ ಪರೀಕ್ಷೆ ಹಾಜರಾತಿ ಪರಿಶೀಲನೆ ಆರಂಭವಾಗಲಿದೆ. ಈ ಹಿನ್ನೆಲೆಯಲ್ಲಿ ಪೂರ್ವ ಪ್ರಾಥಮಿಕ ಹಂತದಲ್ಲಿಯೇ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಬೇಕು. ಈ ಹಂತದಲ್ಲಿಯೇ ಮಕ್ಕಳ ಕಲಿಕಾ ವ್ಯವಸ್ಥೆಯು ಸುಧಾರಣೆಯಾಗುವುದು ಅತ್ಯವಶ್ಯಕವಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಶೇ.25 ರಷ್ಟು ಅನುದಾನ ಸರ್ಕಾರಿ ಶಾಲೆಗಳಿಗೆ ಹೋಗುತ್ತದೆ. ಈ ಅನುಧಾನದಡಿ ಶಾಲೆಯಲ್ಲಿ ಮೂಲಭೂತ ಸೌಕರ್ಯಗಳು ಮತ್ತು ಗುಣಾತ್ಮಕ ಶಿಕ್ಷಣದ ಕಡೆ ಗಮನಹರಿಸಬೇಕು. ಗುಣಾತ್ಮಕ ಶಿಕ್ಷಣವು ಮಕ್ಕಳಿಗೆ ಅನುಕೂಲ ವಾಗುವಂತಿರಬೇಕು ಎಂದು ಹೇಳಿದರು.

ಸಭೆಯಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಶ್ರೀಶೈಲ್ ಬಿರಾದರ್ ಸೇರಿದಂತೆ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಬಿ.ಆರ್.ಪಿ ಮತ್ತು ಸಿ.ಆರ್.ಪಿ.ಗಳು ಹಾಗೂ ಮತ್ತಿತರರಿದ್ದರು.

## ಜಿಲ್ಲಾಡಳಿತದಿಂದ ಶ್ರೀ ಸಂತ ಸೇವಾಲಾಲ್ ಜಯಂತಿ



■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದಲ್ಲಿ ಶ್ರೀ ಸಂತ ಸೇವಾಲಾಲ್ ಜಯಂತಿಯನ್ನು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶನಿವಾರ ಆಚರಿಸಲಾಯಿತು.

ಅಪರ ಜಿಲ್ಲಾಧಿಕಾರಿಗಳಾದ ಸಿದ್ರಾಮೇಶ್ವರ ಅವರು ಸಂತ ಸೇವಾಲಾಲ್ ರವರ ಭಾವಚಿತ್ರಕ್ಕೆ ಪುಷ್ಪಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆ ಉಪ ನಿರ್ದೇಶಕ ಜಗದೀಶ್, ಆಹಾರ ಇಲಾಖೆಯ ಉಪ ನಿರ್ದೇಶಕ ಸೋಮಶೇಖರ್ ಬಿರಾದರ್, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿರಿ ಸುಧಾಕರ ಅಪ್ಪಣ ಮಾನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕೊಟ್ರೇಶ ಮರಬನಳ್ಳಿ, ಜಿಲ್ಲಾ ನಗರಾಭಿವೃದ್ಧಿ ಕೋಶದ ತಹಶಿಲ್ದಾರ ವಿನಾಯಕ್ ಗೋಡಬೋಲೆ ಹಾಗೂ ಜಿಲ್ಲಾಧಿಗಳ ಕಛೇರಿಯ ಶಿರಸ್ತೆದಾರ ಜಗದೀಶ್, ರೇಷ್ಮೆ ಇಲಾಖೆಯ ರಾಜಶೇಖರ ಮತ್ತು ಬಂಜಾರ ಸಮಾಜದ ಮುಖಂಡರಾದ ಯಮನೂರಪ್ಪ, ಪರಸಪ್ಪ, ಹನುಮಂತಪ್ಪ ಮಡ್ಡಿ, ಯಮನಪ್ಪ, ಸೋಮ್ಲಾ ನಾಯ್ಕ್, ರಾಜು ನಾಯ್ಕ್, ಎಕ್ಸಸ್ ಬ್ಯಾಂಕ್‌ನ ಅಸಿಸ್ಟೆಂಟ್ ಮ್ಯಾನೇಜರ್ ರವಿ ನಾಯ್ಕ್ ಹಾಗೂ ಮತ್ತಿತರರು ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿ ಮತ್ತು ಸಿಬ್ಬಂದಿ ಉಪಸ್ಥಿತರಿದ್ದರು.

## ಆದರ್ಶ ವಿದ್ಯಾಲಯದ 6ನೇ ತರಗತಿಗೆ ಪ್ರವೇಶಕ್ಕೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಕೊಪ್ಪಳ**

ಕೊಪ್ಪಳ ತಾಲ್ಲೂಕಿನ ಟಣಕನಕಲ್ ಗ್ರಾಮದಲ್ಲಿನ ಆದರ್ಶ ವಿದ್ಯಾಲಯ ಶಾಲೆಗೆ 2025-26ನೇ ಸಾಲಿಗೆ 6ನೇ ತರಗತಿಗೆ ಪ್ರವೇಶ ಪರೀಕ್ಷೆಯ ಮೂಲಕ ದಾಖಲಾತಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಫೆ. 28ರ ವರೆಗೆ ಅವಕಾಶವಿದ್ದು, ಆಸಕ್ತರು ಆನ್‌ಲೈನ್ ಮೂಲಕ ವೆಬ್‌ಸೈಟ್ https://schooleducation.karnataka.gov.in ನಲ್ಲಿ ಅರ್ಜಿ ಸಲ್ಲಿಸಬೇಕು. ಪ್ರಸ್ತುತ 5ನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಯ ಎಸ್.ಎ.ಟಿ.ಎಸ್ ಸಂಖ್ಯೆ, ವಿದ್ಯಾರ್ಥಿಯ ಇತ್ತೀಚಿನ ಭಾವ ಚಿತ್ರ, ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಆಧಾರ್ ಕಾರ್ಡ ಪ್ರತಿ. ಚಾಲ್ತಿಯಲ್ಲಿರುವ ಪೋಷಕರ ಮೊಬೈಲ್ ಸಂಖ್ಯೆ, ಬೇರೆ ತಾಲೂಕು, ಜಿಲ್ಲೆ, ರಾಜ್ಯಗಳ ಮಕ್ಕಳು ಕಡ್ಡಾಯವಾಗಿ ವ್ಯಾಸಾಂಗ ಪ್ರಮಾಣ ಪತ್ರದ ಸಂಖ್ಯೆಯನ್ನು ಅರ್ಜಿಯೊಂದಿಗೆ ಸಲ್ಲಿಸಬೇಕು (ವಿದ್ಯಾರ್ಥಿಯುವ ಆಯ್ಕೆಯಾದಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದ ವಾಸಸ್ಥಳ ಪ್ರಮಾಣ ಪತ್ರ ಸಲ್ಲಿಸಬೇಕು). ಅಂಗ ವಿಕಲ ವಿದ್ಯಾರ್ಥಿಗಳಿಗೆ ಸಕ್ಷಮ ಪ್ರಾಧಿಕಾರದಿಂದ ನೀಡಿರುವ ಪ್ರಮಾಣ ಪತ್ರ ಕಡ್ಡಾಯ.

ಹೆಚ್ಚಿನ ಮಾಹಿತಿಗಾಗಿ ಮಾಹಿತಿಗಾಗಿ ಮುಖ್ಯೋಪಾಧ್ಯಾಯರು, ಆದರ್ಶ ವಿದ್ಯಾಲಯ, ಟಣಕನಕಲ್, ತಾ.ಜಿ: ಕೊಪ್ಪಳ ಇವರನ್ನು ಶಾಲಾ ಅವಧಿಯಲ್ಲಿ ಸಂಪರ್ಕಿಸಬಹುದು.

# ಗ್ರಾಮ ಪಂಚಾಯತ್‌ಗಳು ಮಕ್ಕಳ ಆಯವಯ್ಯ ಮಂಡಿಸಿ

### ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ ಹೇಳಿಕೆ | ಪ್ರಗತಿ ಪರಿಶೀಲನಾ ಸಭೆ

■ **ಹಂಪಿ ಟೈಮ್ಸ್ ಕೊಪ್ಪಳ**

ಗ್ರಾಮ ಪಂಚಾಯತ್‌ಗಳು 2025-26ನೇ ಸಾಲಿನಲ್ಲಿ ಕಡ್ಡಾಯವಾಗಿ "ಮಕ್ಕಳ ಆಯವಯ್ಯ" ವನ್ನು ಮಂಡಿಸಬೇಕು ಎಂದು ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯರಾದ ಶೇಖರಗೌಡ ಜಿ ರಾಮತ್ನಾಳ ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಹಾಗೂ ಕುಷ್ಟಗಿ ತಾಲೂಕು ಆಡಳಿತ, ತಾಲೂಕು ಪಂಚಾಯತ್, ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಯ ಸಂಯುಕ್ತಾಶ್ರಯದಲ್ಲಿ ಶುಕ್ರವಾರ ಕುಷ್ಟಗಿ ತಾ.ಪಂ ಸಭಾಂಗಣದಲ್ಲಿ ಕುಷ್ಟಗಿ ತಾಲೂಕಿನ, ತಾಲೂಕು ಮಟ್ಟದ ಮಕ್ಕಳ ರಕ್ಷಣೆಯ ವಿವಿಧ ಸಮಿತಿಯ ಸದಸ್ಯರುಗಳೊಂದಿಗೆ ಹಮ್ಮಿಕೊಂಡಿದ್ದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮಕ್ಕಳ ಮೇಲಾಗುವ ಯಾವುದೇ ರೀತಿಯ ಅಪರಾಧಗಳನ್ನು ತಡೆಗಟ್ಟಲು ಮಕ್ಕಳು ಶಾಲೆಯಲ್ಲಿರುವುದು ಅತ್ಯವಶ್ಯಕವಾಗಿದೆ. ಈ ಕಾಯ್ದೆಯು ಜಾರಿಯಾಗಿ 15 ವರ್ಷಗಳು ಗತಿಸಿದರು, ಶಾಲೆಯಿಂದ ಮಕ್ಕಳು




ಹೊರಗುಳಿಯುತ್ತಿರುವುದು ಕಂಡುಬರುತ್ತಿದ್ದು, ಈ ರೀತಿಯಲ್ಲಿ ಶಾಲೆಯಿಂದ ಹೊರಗುಳಿದ, ಬಿಟ್ಟು ಹೋದ ಮಕ್ಕಳೇ ಬಾಲ್ಯವಿವಾಹ, ಬಾಲಕಾರ್ಮಿಕ ಅಥವಾ ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಶಿಕ್ಷಣ ಇಲಾಖೆ, ಸ್ಥಳೀಯ ಸರಕಾರಗಳು ಮಕ್ಕಳನ್ನು ಮರಳಿ ಶಾಲೆ ದಾಖಲಿಸಲು ಕ್ರಮವಹಿಸಬೇಕು ಎಂದರು.

ಗ್ರಾಮ ಪಂಚಾಯತ್‌ಗಳನ್ನು ಮಕ್ಕಳ ಸ್ನೇಹಿಯನ್ನಾಗಿಸಲು ಹಾಗೂ ಮಕ್ಕಳ ಭಾಗವಹಿಸುವ ಹಕ್ಕುಗಳನ್ನು ಖಾತ್ರಿಪಡಿಸಲು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 2024ರ ನವೆಂಬರ್ 14 ರಿಂದ 2025ರ ಜನೆವರಿ 24 ರವರೆಗೆ "ಮಕ್ಕಳಸ್ನೇಹಿ ಗ್ರಾಮ ಪಂಚಾಯತ್ ಅಭಿಯಾನ ಹಾಗೂ ಒಂದು ಮಕ್ಕಳ ಹಕ್ಕುಗಳ ಗ್ರಾಮ ಸಭೆಗಳನ್ನು" ಆಯೋಜಿಸಲು ಆದೇಶಿಸಿದ್ದು, ಆದರೆ ಕುಷ್ಟಗಿ ತಾಲೂಕಿನ ಬೆರಳೆಣಿಕೆ ಗ್ರಾಮ ಪಂಚಾಯತ್‌ಗಳಲ್ಲಿ ಮಾತ್ರ ಕೇವಲ 'ಮಕ್ಕಳ ಹಕ್ಕುಗಳ ಗ್ರಾಮ ಸಭೆ'ಯನ್ನು ಆಯೋಜಿಸಿರುವುದಕ್ಕೆ ವಿಷಾಧನಿಯ. ಆದಷ್ಟು ಶೀಘ್ರದಲ್ಲಿ ಇನ್ನೂಳಿದ ಎಲ್ಲಾ ಗ್ರಾಮ ಪಂಚಾಯತ್‌ಗಳಲ್ಲಿಯೂ "ಮಕ್ಕಳ ಹಕ್ಕುಗಳ ಗ್ರಾಮ ಸಭೆಯನ್ನು ಆಯೋಜಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರುವ 'ಕಸ ವಿಲೇವಾರಿ ವಾಹನ'ಗಳ ಮೂಲಕ "ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ" ಎಂದು ಪ್ರಚುರಪಡಿಸುವ ಮೂಲಕ ಸಮುದಾಯದಲ್ಲಿ ಜಾಗೃತಿಯನ್ನು ಮೂಡಿಸಲು ಕ್ರಮವಹಿಸುವಂತೆ ಸೂಚನೆ ನೀಡಿದರು.

ಬಾಲ್ಯವಿವಾಹ ಮುಕ್ತ ಕೊಪ್ಪಳ ಜಿಲ್ಲೆಯನ್ನಾಗಿಸಲು ಸಮುದಾಯದಲ್ಲಿ ಇನ್ನೂ ಸಾಕಷ್ಟು ಜಾಗೃತಿಯನ್ನು ಮೂಡಿಸಬೇಕಾಗಿರುತ್ತದೆ. ಸಾಮೂಹಿಕ ವಿವಾಹಗಳನ್ನು ಆಯೋಜಿಸುವ ದೇವಸ್ಥಾನಗಳಲ್ಲಿ, ಶಾದಿ ಮಹಲ್, ಖಾಸಗಿ ಕಲ್ಯಾಣ ಮಂಟಪ ಮತ್ತು ಪಂಕ್ಷನ ಹಾಲ್‌ಗಳಲ್ಲಿ "ಬಾಲ್ಯವಿವಾಹ ಶಿಕ್ಷಾರ್ಹ ಅಪರಾಧ" ಎಂಬ ಗೋಡೆ ಬರಹವನ್ನು ಬರೆಯಿಸಿದಲ್ಲಿ ಮಾತ್ರವೇ ಸಾಮೂಹಿಕ ವಿವಾಹ ಅಥವಾ ವಿವಾಹ ಆಯೋಜನೆಗೆ ಅನುಮತಿಯನ್ನು ನೀಡಲು ಕ್ರಮವಹಿಸುವಂತೆ ಸಂಬಂಧಿಸಿದ ಎಲ್ಲಾ ಸ್ಥಳೀಯ ಸರಕಾರಗಳಾದ ಗ್ರಾಮ ಪಂಚಾಯತ್ ಹಾಗೂ ಪಟ್ಟಣ, ಪುರಸಭೆಯ ಮುಖ್ಯಸ್ಥರುಗಳಿಗೆ ಸೂಚಿಸಿದರು.

ಕೃಷಿ ಹೊಂಡಗಳಲ್ಲಿ ಮಕ್ಕಳು ಬಿದ್ದು ಮೃತ ಪಟ್ಟಿರುವ ಘಟನೆಗಳು ಜಿಲ್ಲೆಯಲ್ಲಿ ವರದಿಯಾಗಿರುತ್ತವೆ. ಆದ್ದರಿಂದ ಎಲ್ಲಾ ಕೃಷಿ ಹೊಂಡಗಳಿಗೆ ಇಲಾಖೆಯ ನಿಯಮಾನುಸಾರ ಬೇಲಿ ವ್ಯವಸ್ಥೆ, ಎಚ್ಚರಿಕೆ ಫಲಕ ಹಾಗೂ ಜೀವ ರಕ್ಷಕ ಸಾಧನಗಳನ್ನು ಅಳವಡಿಸುವುದು ಕಡ್ಡಾಯವಾಗಿರುತ್ತದೆ. ಈ ಕುರಿತು ಕ್ರಮವಹಿಸುವುದು. ಯಾವುದೇ ಅವಘಡ ಸಂಭವಿಸಿದಲ್ಲಿ ಇಲಾಖೆಯ ನಿಯಮಾನುಸಾರ ಪೊಲೀಸ್ ಠಾಣೆಗಳಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಿಸಲು ಅವಕಾವಿದ್ದು ಯಾವುದೇ ಅವಘಡ ಸಂಭವಿಸಿದಲ್ಲಿ ಆಯೋಗವು ಕ್ರಮಕ್ಕೆ ಶಿಫಾರಸು ಮಾಡುತ್ತದೆಂದು ಹೇಳಿದರು.

ಮಕ್ಕಳ ರಕ್ಷಣಾಧಿಕಾರಿ ಮಹಾಂತ ಸ್ವಾಮಿ ಪೂಜಾರ ಸೇರಿದಂತೆ ಅಧಿಕಾರಿಗಳು ಇದ್ದರು.